ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಹರಾರೆಯಲ್ಲಿ ಅಫ್ಘಾನಿಸ್ಥಾನ ವಿರುದ್ಧ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ 2ನೇ ಸೆಮಿಫೈನಲ್ ಪಂದ್ಯದಲ್ಲಿ ಭಾರತ 8.5 ಓವರ್ ಬಾಕಿ ಇರುವಂತೆ 311 ರನ್ ಗಳಿಸುವ ಮೂಲಕ ಪಂದ್ಯ ಗೆದ್ದು ಫೈನಲ್ ಪ್ರವೇಶಿಸಿತು.
ಭಾರತ ಪರ ಆ್ಯರನ್ ಜಾರ್ಜ್ ಶತಕ (115 ರನ್)ಗಳಿಸಿದರು.

05 ಫೆಬ್ರವರಿ 2026 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 322 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಚಿನ್ನದ ಬೆಲೆ ಏರುತ್ತಿದೆ ಏಕೆ ? » 2


ರಾಮನಾಥಪುರ : ಇಂದಿನಿಂದ ತಂಬಾಕು ಹರಾಜು ಪುನರಾರಂಭ » 3


ವಿಪಕ್ಷ ನಾಯಕರ ಧ್ವನಿ ಅಡಗಿಸುವುದು ಪ್ರಜಾಪ್ರಭುತ್ವಕ್ಕೆ ಅಪಾಯ » 4

# ಅಬಕಾರಿ ಹಗರಣಕ್ಕೆ ಕಲಾಪ ಬಲಿ

## ಅಧಿವೇಶನದಲ್ಲಿ ವಿಪಕ್ಷಗಳಿಂದ ಭಾರೀ ಗದ್ದಲ | ಅಂತ್ಯಗೊಂಡ ಅಧಿವೇಶನ

• ಪ್ರಜೋದಯ ವರದಿ

**ಬೆಂಗಳೂರು:** ಅಬಕಾರಿ ಇಲಾಖೆಯಲ್ಲಿ ಬಹುಕೋಟಿ ಹಗರಣ ನಡೆದಿದ್ದು, ಸಚಿವ ಆರ್. ಬಿ.ತಿಮ್ಮಾಪುರ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಗೆ ಕಲಾಪ ಬಲಿಯಾಯಿತು. ಪ್ರತಿಪಕ್ಷ ಸದಸ್ಯರ ಅನುಪಸ್ಥಿತಿಯಲ್ಲೇ ವಿಬಿ-ಜಿ ರಾಮ್ ಜಿ ವಿರುದ್ಧದ ನಿರ್ಣಯವನ್ನು ಅಂಗೀಕರಿಸಲಾಯಿತು. ಜನವರಿ 22 ರಿಂದ ಫೆ.4ರವರೆಗೆ ನಡೆದ ಅಧಿವೇಶನ ಕೋಲಾಹಲದಲ್ಲೇ ಅಂತ್ಯಕಂಡಿತು.

ಬುಧವಾರ ಬೆಳಿಗ್ಗೆ ಸದನ ಆರಂಭವಾಗುತ್ತಿದ್ದಂತೆ, ಸದನದ ಮಧ್ಯಭಾಗದಲ್ಲಿದ್ದ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ತಿಮ್ಮಾಪುರ ಅವರ ರಾಜೀನಾಮೆಗೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು. ಈ ವೇಳೆ ಭಾರೀ ಗದ್ದಲದ ವಾತಾವರಣ ನಿರ್ಮಾಣವಾಯಿತು.

ಪ್ರತಿಭಟನೆಗೆ ನಾಯಕತ್ವ ನೀಡಿದ ವಿರೋಧ ಪಕ್ಷದ ನಾಯಕ ಆರ್.



ಅಶೋಕ ಅವರು, ಅಬಕಾರಿ ಇಲಾಖೆಯಲ್ಲಿ ಪರವಾನಗಿ ನೀಡಲು ಹಾಗು ವರ್ಗಾವಣೆ ಸುಗಮಗೊಳಿಸಲು ಲಂಚ ಪಡೆಯಲಾಗುತ್ತಿದೆ ಎಂದು ಆರೋಪಿಸಿದರು. ಮದ್ಯ ವ್ಯಾಪಾರಿಗಳ ಸಂಘವು ಅಬಕಾರಿ ಇಲಾಖೆಯ ಹಗರಣವು ಸುಮಾರು 6,000 ಕೋ.ರೂ. ಮೊತ್ತದಷ್ಟು ಇದೆ ಎಂದು ಆರೋಪಿಸಿದ್ದು, ಸಂಬಂಧಿತ ಆಡಿಯೋ ದಾಖಲೆಗಳನ್ನು ಬಿಡುಗಡೆ ಮಾಡಲಾಗಿದೆ. ಲೋಕಾಯುಕ್ತರಿಗೆ ದೂರುಗಳು ಸಲ್ಲಿಸಲಾಗಿದೆ ಎಂದು ಹೇಳಿದರು.

» ಮೂರನೇ ಪುಟದಲ್ಲಿ

### ಬಿಜೆಪಿ ನಾಯಕರ ವಿರುದ್ಧ ಶಿವಲಿಂಗೇಗೌಡ ಕಿಡಿ

**ಬೆಂಗಳೂರು:** ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಪ ಹಿನ್ನಲೆ ಸಚಿವ ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಅಹೋರಾತ್ರಿ ಧರಣಿ ನಡೆಸಿ ಬುಧವಾರ ವಿಧಾನಸಭೆಯಲ್ಲಿ ಪ್ರತಿಭಟನೆ ಮುಂದುವರಿಸಿದ ಬಿಜೆಪಿ ನಾಯಕರ ವಿರುದ್ಧ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಏಕವಚನದಲ್ಲೇ ವಾಗ್ದಾಳಿ ನಡೆಸಿದ ಪ್ರಸಂಗ ನಡೆಯಿತು.

ವಿಧಾನಸಭೆಯಲ್ಲಿ ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದ ಶಾಸಕ ಕೆ.ಎಂ ಶಿವಲಿಂಗೇಗೌಡ ಅವರು, ನಿಮಗೆ ಏನಾದರೂ ಮಾನ ಮರ್ಯಾದೆ ಇದೆಯಾ. ಇದು ಅಸೆಂಬ್ಲಿನಾ ಅಥವಾ ಡ್ಯಾನ್ಸ್ ಮಾಡೋಕೆ ಬಂದಿದ್ದೀರಾ. ನಾವು ಧರಣಿ ಮಾಡುತ್ತೇವೆ. ಆದರೆ, ಈ ರೀತಿಯಾಗಿ ಮಾಡಿಲ್ಲ. ನಿಮ್ಮಂತರ ಕೆಟ್ಟ ಜನರನ್ನ ನಾನು ಎಲ್ಲಿಯೂ ನೋಡಿಲ್ಲ. ಲೇ ಆರೆಸ್ಸೆಸ್ಸು.. ಆರೆಸ್ಸೆಸ್ಸು .. ಥೂ ನಿಮ್ ಯೋಗ್ಯತೆಗೆ ಬೆಂಕಿ ಹಾಕಾ.. .ಎಂದು ಹರಿಹಾಯ್ದರು.

ನನ್ನನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಲಾಗಿದೆ ಎಂದು ಆಕ್ರೋಶಗೊಂಡ ಶಿವಲಿಂಗೇಗೌಡ, ಬಿಜೆಪಿ ಸದಸ್ಯ ಶರಣು ಸಲಗಾರ್ ಸೇರಿ ಇತರರ ವಿರುದ್ಧ ರೊಚ್ಚಿಗೆದ್ದರು. ಇಂತಹ ಕೆಟ್ಟ ವಿಪಕ್ಷ ನಾನು ನೋಡಿಲ್ಲ. ಅವರನ್ನು ಕೂಡಲೇ ಹೊರಗೆ ಹಾಕಿ. ನನ್ನ ವಿರುದ್ಧ ವೈಯಕ್ತಿಕವಾಗಿ ಟಾರ್ಗೆಟ್ ಮಾಡ್ತಿದ್ದಾರೆ. ಇದು ಕೆಟ್ಟ ವರ್ತನೆ ಎಂದರು.

ಕೊಬ್ಬರಿ ಬಗ್ಗೆ ಯಾರು ಹೋರಾಟ ಮಾಡಿದ್ದರೆಂದು ಅರಸೀಕೆರೆ ಹೋಗಿ ಕೇಳು ಎಂದು ಶರಣು ಸಲಗಾರ್ ಅವರನ್ನು ಏಕವಚನದಲ್ಲೇ ತರಾಟೆಗೆ ತೆಗೆದುಕೊಂಡರು. ನಿನ್ನ ಹೆಂಡತಿನ ತಹಶೀಲ್ದಾರ್ ಮಾಡಿ ದುಡ್ಡು ಹೊಡೆದಿದ್ದೀಯಾ. ನಿನಗೆ ಮಾನ ಮರ್ಯಾದೆ ಇದೆಯಾ ಎಂದು ಏಕವಚನದಲ್ಲೇ ಗುಡುಗಿದರು.

# ರಾಜ್ಯದ ನೀರಾವರಿ ಬಿಕ್ಕಟ್ಟು ಪರಿಹರಿಸಿ

## ರಾಜ್ಯಸಭೆಯಲ್ಲಿ ಗದ್ಗದಿತರಾದ ಹೆಚ್.ಡಿ.ದೇವೇಗೌಡರು

• ಪ್ರಜೋದಯ ವರದಿ

**ನವದೆಹಲಿ:** ಕರ್ನಾಟಕ ಎದುರಿಸುತ್ತಿರುವ ನೀರಾವರಿ ಬಿಕ್ಕಟ್ಟಿನ ಬಗ್ಗೆ ರಾಜ್ಯಸಭೆಯಲ್ಲಿ ಗದ್ಗದಿತರಾಗಿ ಮಾತನಾಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ, ದಯಾಮಾಡಿ ಪರಿಹರಿಸಿ ಎಂದು ಮನವಿ ಮಾಡಿದರು.

ಬುಧವಾರ ನಡೆದ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಜ್ಯದ ಅನೇಕ ನೀರಾವರಿ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಆ ಎಲ್ಲಾ ಯೋಜನೆಗಳಿಗೆ ಅನುಮೋದನೆ ನೀಡುವ ಮೂಲಕ ಕರ್ನಾಟಕ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕೆಂದು ವಿನಂತಿಸಿದರು.

ತಮ್ಮ ಭಾಷಣದಲ್ಲಿ ರಾಜ್ಯದ




ನೀರಾವರಿ ಬಿಕ್ಕಟ್ಟನ್ನು ಎಳೆಎಳೆಯಾಗಿ ಬಿಡಿಸಿಟ್ಟ ಅವರು, ನನ್ನ ರಾಜ್ಯಸಭಾ ಅವಧಿ ಇನ್ನೊಂದು ತಿಂಗಳಲ್ಲಿ ಮುಗಿಯಲಿದೆ. ನನ್ನ ರಾಜ್ಯದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಅವರ ಹಿತ ಕಾಯಿರಿ. ನಾವೆಲ್ಲರೂ ಮನುಷ್ಯರು, ಮಳೆ ಬಿದ್ದರೆ ನೀರು, ಇಲ್ಲವಾದರೆ ಇಲ್ಲ. ಈ ಸದನದ ಎಲ್ಲಾ ಸದಸ್ಯರು ಕರ್ನಾಟಕದ ರಕ್ಷಣೆ ಮಾಡಬೇಕೆಂಬುದಾಗಿ ನಾನು ಕೈ ಮುಗಿದು ಬೇಡುತ್ತೇನೆಂದು ಹೇಳಿದರು.

ಕರ್ನಾಟಕ ನಿರಂತರವಾಗಿ ನೆರೆ ರಾಜ್ಯಗಳ ಜೊತೆ ನೀರಾವರಿ ಹಕ್ಕಿಗಾಗಿ ಹೋರಾಟ ನಡೆಸುತ್ತಿದೆ. ನಾನು ಕೂಡ ನೀರಿಗಾಗಿ 65 ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದೇನೆ. ಈ ಸದನದಲ್ಲಿ ನಾನು ನ್ಯಾಯ ಮಂಡಳಿಗಳು ನೀಡಿರುವ ತೀರ್ಪುಗಳ ಬಗ್ಗೆ ಚರ್ಚಿಸಲು ಬಯಸುವುದಿಲ್ಲ. ಕರ್ನಾಟಕ ರಾಜ್ಯಕ್ಕೆ ನೀರಿನದೇ ಬಹುದೊಡ್ಡ ಬಿಕ್ಕಟ್ಟಾಗಿದೆ. ಒಂದೆಡೆ ತಮಿಳುನಾಡು, ಮತ್ತೊಂದೆಡೆಯಲ್ಲಿ ಆಂಧ್ರ ಪ್ರದೇಶ, ಇನ್ನೊಂದು

» ನಾಲ್ಕನೇ ಪುಟದಲ್ಲಿ

# ಮಾನವ-ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ತಡೆ ಚರ್ಚೆ

## ಕೇಂದ್ರ ಅರಣ್ಯ ಸಚಿವರ ಜೊತೆ ಮಾತುಕತೆ ನಡೆಸಿದ ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ನವದೆಹಲಿ:** ಮಾನವ-ವನ್ಯಜೀವಿ ಸಂಘರ್ಷಕ್ಕೆ ಶಾಶ್ವತವಾಗಿ ತಡೆಯೊಡ್ಡಿ ಜನರ ಜೀವ ರಕ್ಷಣೆ ಮಾಡುವ ಬಗ್ಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್. ಡಿ. ಕುಮಾರಸ್ವಾಮಿ ಅವರು ಕೇಂದ್ರ ಪರಿಸರ, ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಸಂಸತ್ ಭವನದಲ್ಲಿರುವ ಅರಣ್ಯ ಸಚಿವರ ಕಚೇರಿಯಲ್ಲಿ ನಡೆದ ಈ ಭೇಟಿಯ ವೇಳೆ ಕುಮಾರಸ್ವಾಮಿ ಅವರು, ಮುಖ್ಯವಾಗಿ ಹಾಸನ, ಮೈಸೂರು, ಕೊಡಗು, ಚಿಕ್ಕಮಗಳೂರು, ಚಾಮರಾಜನಗರ, ಶಿವಮೊಗ್ಗಾ ಸೇರಿ ವಿವಿಧ ಜಿಲ್ಲೆಗಳಲ್ಲಿ ನಡೆಯುತ್ತಿರುವ ಕಾಡಾನೆಗಳ ದಾಳಿ



ಬಗ್ಗೆ ಚರ್ಚೆ ನಡೆಸಿದರು.

ವನ್ಯಜೀವಿ ಉಪಟಳ ನಿರಂತರವಾಗಿ ನಡೆಯುತ್ತಿದೆ. ಇದರಿಂದ ಅರಣ್ಯದಂಚಿನಲ್ಲಿ ಬೇಸಾಯ ಮಾಡುವ, ದನಕರುಗಳನ್ನು ಮೇಯಿಸುವ ರೈತರು ಬಲಿಯಾಗಿದ್ದಾರೆ. ಇನ್ನೂ ಅನೇಕರು ಗಾಯಗೊಂಡು ಶಾಶ್ವತವಾಗಿ ಅಂಗವೈಕಲ್ಯಕ್ಕೆ ತುತ್ತಾಗುತ್ತಿದ್ದಾರೆ. ಕರ್ನಾಟಕದಲ್ಲಿ ಈ ಸಮಸ್ಯೆ ಬಿಗಡಾಯಿಸಿದ್ದು, ಶಾಶ್ವತ ಪರಿಹಾರ ಕಂಡುಕೊಳ್ಳಬೇಕೆಂದು ಕುಮಾರಸ್ವಾಮಿ ವಿನಂತಿಸಿದರು.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಚಿವರು, ಈ ಬಗ್ಗೆ ತುರ್ತು ಗಮನ ಹರಿಸುವುದಾಗಿ ಭರವಸೆ ನೀಡಿದರಲ್ಲದೆ, ಪೂರಕವಾದ ಎಲ್ಲಾ ಮಾಹಿತಿಯನ್ನು ಸಚಿವ ಕುಮಾರಸ್ವಾಮಿ ಅವರಿಂದ ಪಡೆದುಕೊಂಡರು. ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳ ಬಗ್ಗೆ ಅಧಿಕಾರಿಗಳು ಹೇಗೆ ಕಾರ್ಯ ನಿರ್ವಹಿಸಬೇಕೆನ್ನುವ ಕುರಿತು ನಿರ್ದೇಶನ ನೀಡಿದರು.

ಪ್ರಸ್ತುತ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವಂತೆ ಸಚಿವ ಭೂಪೇಂದ್ರ ಯಾದವ್ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ತ್ವರಿತವಾಗಿ ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದರು.

# ಭಾಗ್ಯಲಕ್ಷ್ಮಿ ಯೋಜನೆ : ನೋಂದಣಿ ಪ್ರಮಾಣ ಹೆಚ್ಚಳ

## ಮೆಚ್ಯುರಿಟಿ ಮೊತ್ತ ಪಾವತಿ ಹಿನ್ನಲೆ | 3,471 ಫಲಾನುಭವಿಗಳಿಂದ ಅರ್ಜಿ

• ಪ್ರಜೋದಯ ವರದಿ

**ಹಾಸನ:** ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಜನನ ಹಾಗು ಶಿಕ್ಷಣಕ್ಕೆ ನೆರವಾಗಲೆಂದು 2006-07ರಲ್ಲಿ ಜಾರಿಗೆ ತಂದ ಭಾಗ್ಯಲಕ್ಷ್ಮಿ ಯೋಜನೆಯ ಮೆಚ್ಯುರಿಟಿ ಮೊತ್ತ ಪಾವತಿಯಾಗುತ್ತಿದ್ದು, ಯೋಜನೆಯ ಮಹತ್ವ ಅರಿತ ಸಾರ್ವಜನಿಕರು ನೋಂದಣಿಗೆ ಆಸಕ್ತಿ ತೋರುತ್ತಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಾರಿಗೊಳಿಸಿದ ಯೋಜನೆ ಇದಾಗಿದೆ. ಅವರ ಅಧಿಕಾರಾವಧಿ ಮುಗಿದ ಬಳಿಕ ಯೋಜನೆಗೂ ಎಳ್ಳುನೀರು ಬಿಡಲಾಗಿದೆ ಎಂಬ ಕಲ್ಪನೆ ಬಹುತೇಕರಲ್ಲಿ ಇತ್ತು. ಆದರೆ, ನಿಯಮದಂತೆ ಮಗುವಿಗೆ 18 ವರ್ಷ ತುಂಬಿದ ಬಳಿಕ ಮೆಚ್ಯುರಿಟಿ ಹಣ ಬ್ಯಾಂಕ್ ಖಾತೆಗೆ ಜಮೆಯಾಗುತ್ತಿದೆ. ಜಿಲ್ಲೆಯಲ್ಲಿ 2006-07 ಹಾಗು 2007-08ನೇ ಸಾಲಿನಲ್ಲಿ ನೋಂದಣಿಯಾಗಿದ್ದ 14,052 ಮಕ್ಕಳ ಪೈಕಿ 9,465 ಜನರಿಗೆ ಹಣ ಪಾವತಿಯಾಗಿದೆ. ಉಳಿದವರಿಗೆ ಹಂತ ಹಂತವಾಗಿ ಜಮೆಯಾಗುತ್ತಿದೆ. 2025-26ನೇ ಸಾಲಿನಲ್ಲಿ ಭಾಗ್ಯಲಕ್ಷ್ಮಿ ಸುಕನ್ಯ ಸಮೃದ್ಧಿ ಯೋಜನೆಯಡಿ 3,471 ಫಲಾನುಭವಿಗಳು ನೋಂದಣಿಯಾಗಿದ್ದಾರೆ.

### ಏನಿದು ಯೋಜನೆ

ಭಾಗ್ಯಲಕ್ಷ್ಮಿ ಯೋಜನೆಯನ್ನು ಆರ್ಥಿಕ ಪಾಲುದಾರ ಸಂಸ್ಥೆಯಾದ ಭಾರತೀಯ ಜೀವಾ ವಿಮಾ ನಿಗಮದ (ಎಲ್ಐಸಿ) ಸಹಯೋಗದೊಂದಿಗೆ 2006-07ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅನುಷ್ಠಾನಗೊಳಿಸಿತ್ತು. 2006 ಮಾ.31ರ ಬಳಿಕ ಬಿಪಿಎಲ್ ಕಾರ್ಡ್‌ದಾರ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳ ಹೆಸರಿನಲ್ಲಿ ಪೋಷಕರಿಗೆ ಭಾಗ್ಯಲಕ್ಷ್ಮಿ ಯೋಜನೆಯಡಿ ಬಾಂಡ್‌ಗಳನ್ನು ವಿತರಿಸಲಾಗಿತ್ತು. ಅದು ಈಗ ಪ್ರೌಢಾವಸ್ಥೆ (ಮೆಚ್ಯುರಿಟಿ) ಹಂತ ತಲುಪಿದೆ.

### ಸಿಗಲಿರುವ ಮೊತ್ತ

2006 ಮಾರ್ಚ್ ಅವಧಿಯಲ್ಲಿ ಜನಿಸಿದ ಹೆಣ್ಣು ಮಕ್ಕಳ ಹೆಸರಿನಲ್ಲಿ ಇಡಲಾದ 10,000 ರೂ. ಠೇವಣಿಯು 18 ವರ್ಷಗಳ ಬಳಿಕ ಅಂದಾಜು ಪರಿಪಕ್ವ ಮೊತ್ತ ಒಂದನೇ ಮಗುವಿಗೆ 34,751 ರೂ. ಹಾಗು ಎರಡನೇ ಮಗುವಿಗೆ 40,069 ರೂ. ಆಗಿದೆ.

**2025ರ ಏಪ್ರಿಲ್‌ನಿಂದ ಡಿಸೆಂಬರ್ ವರೆಗೆ ನೋಂದಣಿ ವಿವರ**

| ತಾಲ್ಲೂಕು | ಫಲಾನುಭವಿಗಳು |
|---|---|
| ಹಾಸನ | 727 |
| ಚನ್ನರಾಯಪಟ್ಟಣ | 708 |
| ಹೊಳೆನರಸೀಪುರ | 324 |
| ಬೇಲೂರು | 302 |
| ಸಕಲೇಶಪುರ | 269 |
| ಆಲೂರು | 123 |
| ಅರಸೀಕೆರೆ | 603 |
| ಅರಕಲಗೂಡು | 415 |
| ಒಟ್ಟು | 3471 |

01-08-2008ರ ನಂತರ ಜನಿಸಿದ ಹೆಣ್ಣು ಮಕ್ಕಳ ಹೆಸರಿನಲ್ಲಿ 19,300 ರೂ. ಠೇವಣಿಯೊಂದಿಗೆ 18 ವರ್ಷದ ಬಳಿಕ ಮೊದಲನೇ ಮಗು 1,00,052 ರೂ. ಹಾಗು ಎರಡನೇ ಮಗುವಿಗೆ 1,00.097 ರೂ. ಹಣ ಖಾತೆಗೆ ಜಮಾ ಆಗಲಿದ್ದು 2021-22ನೇ ಸಾಲಿನಿಂದ ಸುಕನ್ಯಾ ಸಮೃದ್ಧಿ ಭಾಗ್ಯಲಕ್ಷ್ಮೀ ಯೋಜನೆ ಮುಂದುವರಿಯುತ್ತದೆ.

2020-21ನೇ ಸಾಲಿನಿಂದ ಆಡಳಿತಾತ್ಮಕ ಕಾರಣಗಳಿಂದ ಭಾಗ್ಯಲಕ್ಷ್ಮಿ ಯೋಜನೆ ಸಂಪೂರ್ಣವಾಗಿ ಮಾರ್ಪಾಡು ಹೊಂದಿದ್ದು, ಅಂಚೆ ಇಲಾಖೆಯ ಸಹಯೋಗದೊಂದಿಗೆ ಎಪಿಎಲ್ ಕಾರ್ಡ್‌ದಾರರ ಕುಟುಂಬಕ್ಕೆ ಸಮೃದ್ಧಿ ಯೋಜನೆ ಹಾಗು ಬಿಪಿಎಲ್ ಕುಟುಂಬಕ್ಕೆ ಸುಕನ್ಯಾ ಸಮೃದ್ಧಿ ಭಾಗ್ಯಲಕ್ಷ್ಮಿ ಯೋಜನೆ ಎಂದು ಮರುನಾಮಕರಣಗೊಂಡಿದೆ.

» ನಾಲ್ಕನೇ ಪುಟದಲ್ಲಿ

# ಗರ್ಭಾಶಯ ಕೊರಳ ಕ್ಯಾನ್ಸರ್‌ನಿಂದ ಪಾರಾಗಲು ಲಸಿಕೆ ಪಡೆಯಿರಿ

## ಸ್ತ್ರೀ ರೋಗ-ಪ್ರಸೂತಿ ತಜ್ಞರ ಸಂಘದ ಅಧ್ಯಕ್ಷೆ ಡಾ|| ಪ್ರೇಮಲತಾ | ಪತ್ರಕರ್ತರ ಸಂಘದಿಂದ ಅರಿವು ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಗರ್ಭಾಶಯ ಕೊರಳ ಕ್ಯಾನ್ಸರ್‌ನಿಂದ ಮಹಿಳೆಯರನ್ನು ಕಾಪಾಡಲು ವ್ಯಾಕ್ಸಿನ್ ಲಭ್ಯವಿದ್ದು, 9 ರಿಂದ 14 ವರ್ಷದೊಳಗಿನ ಮಕ್ಕಳಿಗೆ ನೀಡುವ ಮೂಲಕ ಖಾಯಿಲೆಯಿಂದ ದೂರವಿರಬಹುದೆಂದು ಜಿಲ್ಲಾ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರ ಸಂಘದ ಅಧ್ಯಕ್ಷೆ ಡಾ|| ಪ್ರೇಮಲತಾ ಅವರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಬುಧವಾರ ರಾಧಮ್ಮ ಜನ ಸ್ಪಂದನ ದಿವಾಕರ ಸೇವಾ ಪ್ರತಿಷ್ಠಾನ, ಹೆಚ್‌ಡಿಆರ್ ಹೆಲ್ತ್ ಕೇರ್ ಫೌಂಡೇಶನ್ ಹಾಗು ಜಿಲ್ಲಾ ಸ್ತ್ರೀ ರೋಗ ಹಾಗು ಪ್ರಸೂತಿ ತಜ್ಞರ ಸಂಘದಿಂದ ಹಮ್ಮಿಕೊಂಡಿದ್ದ ಹೆಚ್.ಪಿ.ವಿ. ಲಸಿಕೆ ಹಾಕುವ ಹಾಗು




ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ಮೂರು ಸಾವಿರ ಮಕ್ಕಳಿಗೆ ಹೆಚ್.ಪಿ.ವಿ. ಲಸಿಕೆ ಹಾಕಲಾಗಿದೆ. ಗರ್ಭಾಶಯ ಕೊರಳ ಕ್ಯಾನ್ಸರ್ ಚಿಕಿತ್ಸೆಗಾಗಿ ಜನರು ವೈದ್ಯರ ಬಳಿ ಬರುವುದಿಲ್ಲ. ಒಂದು ವೇಳೆ ಬಂದರೂ ಲಸಿಕೆಗೆ ಖರ್ಚಾಗುವ ದುಡ್ಡು ಎಷ್ಟು ಎಂದು ಮೊದಲೇ ಕೇಳುತ್ತಾರೆ. ಈ ರೀತಿಯ ನಿರ್ಲಕ್ಷ್ಯದಿಂದ ಲಸಿಕೆ ಪಡೆಯುತ್ತಿರುವವರ ಸಂಖ್ಯೆ ದೇಶದಲ್ಲಿ ಶೇ.3ಕ್ಕಿಂತ ಕಡಿಮೆ ಇದೆ ಎಂದರು.

ವಿದೇಶಗಳಲ್ಲಿ ಈ ಖಾಯಿಲೆ ಕುರಿತು ಎಚ್ಚರಿಕೆ ವಹಿಸುತ್ತಾರೆ. ಆದರೆ, ನಮ್ಮ ದೇಶದಲ್ಲಿ ಇನ್ನಷ್ಟು ಕೆಲಸಗಳಾಗಬೇಕಿದೆ. ಸರ್ಕಾರವೂ ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಂಡಿದೆ. ಸಾರ್ವತ್ರಿಕವಾಗಿ ಲಸಿಕೆ ನೀಡುವ ಉದ್ದೇಶದಿಂದ ತರಬೇತಿ ಕಾರ್ಯಕ್ರಮ ನಡೆಯುತ್ತಿದೆ ಎಂದರು.

9 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಆರು ತಿಂಗಳಲ್ಲಿ ಮೂರು ಡೋಸ್ ಲಸಿಕೆ ಹಾಕಬೇಕಾಗುತ್ತದೆ. ಮದುವೆಗಿಂತ ಮೊದಲು ಲಸಿಕೆ ಹಾಕಿಸಿ ಕೊಂಡರೆ ಪರಿಣಾಮಕಾರಿಯಾಗಿರುತ್ತದೆ. ಸ್ಕ್ರೀನಿಂಗ್ ಹಾಗು ಪ್ಯಾಪ್ ಸ್ಮಿಯರ್ ಪರೀಕ್ಷೆಗೆ ಒಳಪಡುವುದರಿಂದ ಕ್ಯಾನ್ಸರ್ ಲಕ್ಷಣಗಳನ್ನು ಪತ್ತೆ ಹಚ್ಚಬಹುದು. ಎಲ್ಲರ ಆರೋಗ್ಯದಲ್ಲಿ ಈ ಖಾಯಿಲೆಯ ಗುಣ ಲಕ್ಷಣಗಳಿರುತ್ತವೆ. ರೋಗದ 16 ಮತ್ತು 18ನೇ ಜಾತಿ ಶೇ.80 ರಷ್ಟು ಮಹಿಳೆಯರನ್ನು ಬಾಧಿಸುತ್ತದೆ. ಗರ್ಭಾಶಯ ಕ್ಯಾನ್ಸರ್ ಪತ್ತೆಯಾಗಲು 10 ರಿಂದ 15 ವರ್ಷ ಸಮಯ ತೆಗೆದುಕೊಳ್ಳುತ್ತದೆ. ನಿರ್ಲಕ್ಷ್ಯ ವಹಿಸದೆ ಮಹಿಳೆಯರು ನಿಗದಿತ ತಪಾಸಣೆಗೆ ಒಳಪಡಬೇಕೆಂದು ಸಲಹೆ ನೀಡಿದರು.

» ನಾಲ್ಕನೇ ಪುಟದಲ್ಲಿ

# ಬೇಲೂರಿನಲ್ಲಿ ಫೆ.7 ರಂದು ಜನಸ್ಪಂದನಾ ಸಭೆ

• ಪ್ರಜೋದಯ ವರದಿ

**ಹಾಸನ :** ಬೇಲೂರಿನ ತಾಲ್ಲೂಕು ಕಚೇರಿ ಆವರಣದಲ್ಲಿ ಫೆ.07 ರಂದು ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಮಟ್ಟದ ಜನಸ್ಪಂದನಾ ಸಭೆ ಆಯೋಜಿಸಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರ ಅಧ್ಯಕ್ಷತೆಯಲ್ಲಿ ಜನಸ್ಪಂದನಾ ಸಭೆ ಆಯೋಜಿಸಲಾಗಿದ್ದು, ಬೇಲೂರು ತಾಲ್ಲೂಕಿನ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಖುದ್ದು ಹಾಜರಾಗಿ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿಕೊಂಡು ಟೋಕನ್ ನಂಬರ್ ಪಡೆದು ತಮ್ಮ ಅಹವಾಲನ್ನು ಸಲ್ಲಿಸಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಭೂ ಮಂಜೂರಾತಿಗೆ ಆಗ್ರಹಿಸಿ ಫಲಾನುಭವಿಗಳ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕಾರೆಕೆರೆ ಕಾವಲು ಗ್ರಾಮದಲ್ಲಿ ಆರು ದಶಕಗಳಿಂದ ಉಳುಮೆ ಮಾಡಿಕೊಂಡು ಬಂದಿರುವ ದಲಿತ ಕುಟುಂಬಗಳಿಗೆ ಭೂಮಿ ಮಂಜೂರು ಮಾಡಬೇಕೆಂದು ಆಗ್ರಹಿಸಿ ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಫಲಾನುಭವಿಗಳು ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಕಾರೆಕೆರೆ ಕಾವಲು, ಹೊಸೂರು, ಹಾಗು ಜುಂಜನಹಳ್ಳಿ ಗ್ರಾಮದ ಸುಮಾರು 47 ದಲಿತ ಕುಟುಂಬಗಳು ಅನುಭವದಲ್ಲಿದ್ದಾರೆ. ಕಾರೆಕೆರೆ ಕಾವಲಿನ 246 ಎಕರೆ ಭೂಮಿಯನ್ನು 1966ರಲ್ಲಿ 30 ದಲಿತ ಕುಟುಂಬಗಳಿಗೆ ನಿಗದಿಪಡಿಸಲಾಗಿದೆ. ಆದರೆ, 10 ಕುಟುಂಬಗಳು ಮಾತ್ರ ಉಳುಮೆ ಮಾಡಿಕೊಂಡಿವೆ. 20 ಕುಟುಂಬಗಳು ಅಂದಿನಿಂದ ಇಲ್ಲಿಯವರೆಗೂ ಈ ಭೂಮಿಯನ್ನು ಸ್ವಾಧೀನಕ್ಕೆ ಪಡೆ




ಯಲು ಸಾಧ್ಯವಾಗಿಲ್ಲ. ಈ ಭೂಮಿಯಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲದವರ ಮತ್ತು ಗ್ರಾಮದಲ್ಲಿ ವಾಸವಿಲ್ಲದವರ ಮೂಲ ಮಂಜೂರಾತಿಯನ್ನು ರದ್ದುಗೊಳಿಸಿ, ಹಾಲಿ ಅನುಭವದಲ್ಲಿದ್ದು, ಸಾಗುವಳಿ ಮಾಡುತ್ತಿರುವ ಕಾರೆಕೆರೆ ಕಾವಲು ಗ್ರಾಮದ 47 ಕುಟುಂಬಗಳಿಗೆ ಹೊಸದಾಗಿ ಭೂ ಮಂಜೂರು ಮಾಡಿಕೊಡಬೇಕೆಂದು ಈ ಹಿಂದೆ ಹಲವು ಬಾರಿ ತಾಲ್ಲೂಕು ಮತ್ತು ಜಿಲ್ಲಾಡಳಿತಕ್ಕೆ ರೈತರು ಅರ್ಜಿ ಸಲ್ಲಿಸಲಾಗಿದೆ. ಜೊತೆಗೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣದ ಅಡಿಯಲ್ಲಿ ಅರ್ಜಿ ನಮೂನೆ 50, 53 ಮತ್ತು 57 ಸಲ್ಲಿಸಿದ್ದಾರೆ. ಈ ವರೆಗೆ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿದರು.

ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಉಳುಮೆ ಮಾಡುತ್ತಿರುವ ದಲಿತರನ್ನು

» ನಾಲ್ಕನೇ ಪುಟದಲ್ಲಿ

# ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಮಮತಾ ಬ್ಯಾನರ್ಜಿ

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮೂಲಕ ರಾಜ್ಯವನ್ನು ಗುರಿಯಾಗಿಸಿ ಹಗೆತನ ಸಾಧಿಸುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಹಿರಿಯ ವಕೀಲ ಶ್ಯಾಮ್ ದಿವಾನ್ ಸೇರಿ ವಕೀಲರ ತಂಡದೊಂದಿಗೆ, ಸ್ವತಃ ಪ್ರಕರಣದಲ್ಲಿ ವಾದ ಮಂಡಿಸಿದರು. ಈ ಮೂಲಕ ಖುದ್ದು ಸುಪ್ರೀಂ ಕೋರ್ಟ್‌ಗೆ ಹಾಜರಾಗಿ ವಾದ ಮಂಡಿಸಿದ ಮೊದಲ ಮುಖ್ಯಮಂತ್ರಿ ಎಂಬ ದಾಖಲೆ ನಿರ್ಮಿಸಿದರು.

ನಮಗೆ ನ್ಯಾಯದಾನ ವಿಳಂಬವಾಗುತ್ತಿದೆ. ನ್ಯಾಯವು ಮುಚ್ಚಿದ ಬಾಗಿಲಗಳ ಹಿಂದೆ ಕಣ್ಣೀರಿಡುತ್ತಿದೆ. ನಮಗೆ ನ್ಯಾಯ ಸಿಗುವುದಿಲ್ಲವೆಂದು ಖಾತ್ರಿಯಾದಾಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದೇವೆ. ನಾನು ಮುಖ್ಯ ವ್ಯಕ್ತಿಯೇನೂ ಅಲ್ಲ. ಆದರೆ, ನನ್ನ ಜನರಿಗಾಗಿ ಹೋರಾಡುತ್ತಿದ್ದೇನೆಯೇ ವಿನಾ ನನ್ನ ಪಕ್ಷಕ್ಕಾಗಿ ಅಲ್ಲವೆಂದು ನ್ಯಾಯಾಲಯಕ್ಕೆ ತಿಳಿಸಿದರು.

## 35 ವಾರ್ಡ್‌ಗಳಿಗೆ ಸೀಮಿತ : ಗಡಿ ಗುರುತಿಸಿ ಕರಡು ಅಧಿಸೂಚನೆ ಪ್ರಕಟ

# ಪಾಲಿಕೆ ಚುನಾವಣೆ ಸನಿಹ: ವಾರ್ಡ್ ಮರು ವಿಂಗಡಣೆ

• ಪ್ರಜೋದಯ ವರದಿ

**ಹಾಸನ:** ಹಾಸನ ನಗರಸಭೆ ಮಹಾ ನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಹಿನ್ನಲೆಯಲ್ಲಿ ವಾರ್ಡ್‌ಗಳ ಮರು ವಿಂಗಡಣೆಗೊಳಿಸಿ ಕರಡು ಪ್ರಕಟಿಸುವ ಮೂಲಕ ಪಾಲಿಕೆ ಚುನಾವಣೆಗೆ ಸಿದ್ಧತೆ ಪ್ರಾರಂಭಿಸಲಾಗಿದೆ.

ಮಹಾನಗರ ಪಾಲಿಕೆಗಳ ಅಧಿ ನಿಯಮ 1976 ರ ಕಲಂ-7(2)(ಎ) ಮತ್ತು 21ರ ಅನ್ವಯ 2011ರ ಜನ ಗಣತಿಯ ಆಧಾರದ ಮೇಲೆ ಪಾಲಿಕೆಗೆ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಿಸಿ, ಮೊದಲಿನಂತೆ 35 ವಾರ್ಡ್‌ಗಳಿಗೆ ಸೀಮಿತಗೊಳಿಸಿ, ಗಡಿ ಗುರುತಿಸಲಾಗಿದೆ. ರಾಜ್ಯಪಾಲರ ಆಜ್ಞಾನುಸಾರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಆಕ್ಷೇಪಣೆಗಳಿದ್ದಲ್ಲಿ 15 ದಿನಗಳೊಳಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಗೆ ಸಲ್ಲಿಸಲು ಸೂಚಿಸಲಾಗಿದೆ.

### ಬೂವನಹಳ್ಳಿ- 1ನೇ ವಾರ್ಡ್

ಬೂವನಹಳ್ಳಿ ಗ್ರಾಮದ ಈಶಾನ್ಯ ಬಿಂದುವಿನಿಂದ ಪ್ರಾರಂಭಗೊಂಡು ಸಮುದ್ರವಳ್ಳಿ, ಗೇಕರವಳ್ಳಿ, ಕೆಂಚಟ್ಟಹಳ್ಳಿ, ಕಸ್ತೂರವಳ್ಳಿ, ಮತ್ತು ಬುಸ್ತೇನಹಳ್ಳಿ ಒಳಗೊಂಡು ಬಿ.ಎಂ.ರಸ್ತೆ ತಲುಪಿ ನಂತರ ಪಶ್ಚಿಮಾಭಿಮುಖವಾಗಿ ಬೆಂಗಳೂರು ಹಾಸನ ಬಿ.ಎಂ.ರಸ್ತೆಯಲ್ಲಿ ಸಾಗಿ ಅರಸೀಕೆರೆ ಹಾಸನ ರೈಲ್ವೆ ಹಳಿಯವರೆಗೆ (ಬಿ.ಎಂ.ರಸ್ತೆ ಮತ್ತು ಸೇತುವೆ) ಸಾಗಿ ನಂತರ




ಉತ್ತರಾಭಿಮುಖವಾಗಿ ಅರಸೀಕೆರೆ ರೈಲ್ವೆ ಹಳಿಯಲ್ಲಿಯೇ ಸಾಗಿ ದೊಡ್ಡಪುರ ಮತ್ತು ಸಂಕೇನಹಳ್ಳಿ ಕೂಡುವ ಸರ್ವೆ ನಂ.50ರ ಬಿಂದುವಿನಿಂದ ಬೂವನಹಳ್ಳಿ ಗ್ರಾಮದ ಸರ್ವೆ ನಂ.42ಕ್ಕೆ ಬಂದು ಕೊನೆಗೊಳ್ಳುತ್ತದೆ.

### ದೊಡ್ಡಪುರ-2ನೇ ವಾರ್ಡ್

ಅರಸೀಕೆರೆ-ಹಾಸನ ಮುಖ್ಯ ರಸ್ತೆಯ ದೊಡ್ಡಪುರ ಗ್ರಾಮದ ಸರ್ವೆ ನಂ.24 ರಿಂದ ಪ್ರಾರಂಭಗೊಂಡು ಸಂಕೇನಹಳ್ಳಿ, ಬಿ. ಕಾಟೀಹಳ್ಳಿ ಕೂಡುವ ಸರ್ವೆ ನಂ.223ಕ್ಕೆ ಬಂದು ತಲುಪುತ್ತದೆ. ದೊಡ್ಡಪುರ ಗ್ರಾಮದ ಎಲ್ಲಾ ಸರ್ವೆ ನಂಬರ್‌ಗಳನ್ನೊಳಗೊಂಡಂತೆ ಪ್ರಾರಂಭ ಬಿಂದುವಾದ ಹಾಸನ ಅರಸೀಕೆರೆ ರಸ್ತೆಗೆ ಬಂದು ತಲುಪುತ್ತದೆ.

### 3ನೇ ವಾರ್ಡ್

ಹಾಸನ-ಬೆಂಗಳೂರು ಬೂವನಹಳ್ಳಿ ಬೈಪಾಸ್ ವೃತ್ತದಿಂದ ಪ್ರಾರಂಭಗೊಂಡು ಗವೇನಹಳ್ಳಿ ಗ್ರಾಮದ ಸರ್ವೆ ನಂ-144, 8 ಒಳಗೊಂಡು ಹಾಸನ ಬೆಂಗಳೂರು ರೈಲ್ವೆಹಳಿ ಛೇದಿಸಿಕೊಂಡು ಗವೇನಹಳ್ಳಿ ಗ್ರಾಮದ ಸರ್ವೆ ನಂ-97,103,15ನ್ನು ಒಳಗೊಂಡು ಗೆಂಡೆಕಟ್ಟೆ ಅರಣ್ಯ ಗಡಿಯಂಚಿನಲ್ಲಿ ಸಾಗಿ, ರಾಜಘಟ್ಟ ಗ್ರಾಮ ಒಳಗೊಂಡು, ಸಂತೆಪೇಟೆ ವೃತ್ತಕ್ಕೆ ತಲುಪಿ ಅಲ್ಲಿಂದ ದಕ್ಷಿಣಾಭಿಮುಖವಾಗಿ ಗೊರೂರು ರಸ್ತೆಯಲ್ಲಿ ಸಾಗಿ ಹಾಸನ ಮಂಗಳೂರು ರೈಲ್ವೆ ಹಳಿಗೆ ತಲುಪಿ ನಂತರ ಪೂರ್ವಾಭಿಮುಖವಾಗಿ ರೈಲ್ವೆ ಹಳಿಯಲ್ಲಿ ಸಮಾಂತರವಾಗಿ ಸಾಗಿ ಬಿ.ಎಂ.ರಸ್ತೆಯ ರಾಜಘಟ್ಟ ಸಂಪರ್ಕಿಸುವ ಕೆಳ ಸೇತುವೆಯನ್ನು ತಲುಪುವುದು. ಪೂರ್ವಾಭಿಮುಖವಾಗಿ ಬಿ.ಎಂ. ರಸ್ತೆಯಲ್ಲಿಯೇ ಸಾಗಿ ಕೆ.ಎಸ್.ಆರ್.ಟಿ.ಸಿ ಕೇಂದ್ರ ಕಚೇರಿ, ವಸತಿ ಗೃಹಗಳು, ರೇಷ್ಮೆ ವಸತಿ ಗೃಹಗಳು, ಅರಣ್ಯ ಭವನದ ಮೂಲಕ ಡೇರಿ ವೃತ್ತಕ್ಕೆ ತಲುಪುತ್ತದೆ.

### 4ನೇ ವಾರ್ಡ್

ಗೆಂಡೆಕಟ್ಟೆ ಅರಣ್ಯ ಪ್ರದೇಶ ದೊಡ್ಡಬಸವನಹಳ್ಳಿಯಿಂದ ಪ್ರಾರಂಭಗೊಂಡು ನಾಗತವಳ್ಳಿ ಗ್ರಾಮ (ಪೂರ್ಣ ಕೈಗಾರಿಕಾ ಪ್ರದೇಶ ಒಳಗೊಂಡಂತೆ) ಸಂಕಲಾಪುರ ಗ್ರಾಮ ಮತ್ತು ಕೊಕ್ಕನಘಟ್ಟ ಗ್ರಾಮದ ಪೂರ್ಣ ಸರ್ವೆ ನಂಬರ್ ಒಳಗೊಂಡಂತೆ, ಬಿಟ್ಟಗೌಡನಹಳ್ಳಿ, ಗೊರೂರು ವೃತ್ತ ತಲುಪುವುದು. ಅಲ್ಲಿಂದ ಪೂರ್ವಾಭಿಮುಖವಾಗಿ ಬೈಪಾಸ್ ರಸ್ತೆಯಲ್ಲಿಯೇ ಸಾಗಿ ಬೊಮ್ಮನಾಯನಕನಹಳ್ಳಿ ಹಾಗು ಹೊಸಕೊಪ್ಪಲು ಒಳಗೊಂಡು ದೊಡ್ಡಬಸವನಹಳ್ಳಿ ಗ್ರಾಮದ ಸರ್ವೆ ನಂ-130ಕ್ಕೆ ತಲುಪುತ್ತದೆ.

### 5ನೇ ವಾರ್ಡ್

ರಾಜಘಟ್ಟಕ್ಕೆ ಸಂಪರ್ಕಿಸುವ ರೈಲ್ವೆ ಕೆಳ ಸೇತುವೆ ಪ್ರಾರಂಭಗೊಂಡು ರಾಜೀವ್ ಕಾಲೇಜು ಮುಂಭಾಗದ ಸರ್ಕಲ್‌ಗೆ ತಲುಪುವುದು. ನಂತರ ಬೈಪಾಸ್ ರಸ್ತೆಯಲ್ಲಿ ಹಾಸನ ಹೊಳೆನರಸೀಪುರ ರಸ್ತೆಯ ಸರ್ಕಲ್ ಛೇದಿಸಿಕೊಂಡು ನಾರಿಹಳ್ಳಿ ಮೂಲಕ ಚಿಕ್ಕಮಂಡಿಗನಹಳ್ಳಿ ಐ.ಎ.ತಟ್ಟೆಕೆರೆ ಮತ್ತು ದೊಡ್ಡ ಮಂಡಿಗನಹಳ್ಳಿ ಗ್ರಾಮಗಳು ಕೂಡುವ ಬಿಂದುವಿಗೆ ತಲುಪಿ ನಂತರ ಚಿಕ್ಕಮಂಡಿಗನಹಳ್ಳಿ ಗ್ರಾಮದ ಸರ್ವೆ ನಂ.27 ಅನ್ನು ಒಳಗೊಂಡಂತೆ ಹಾಸನ ಹಾಲುವಾಗಿಲು ಮುಖ್ಯ ರಸ್ತೆಯ ಮೂಲಕ ಚಿಕ್ಕಮಂಡಿಗನಹಳ್ಳಿ ಗ್ರಾಮದ ಸರ್ವೆ ನಂ.28,43,4,1ರ ಭಾಗಶ: ಒಳಗೊಂಡು ಬಿ.ಎಂ.ರಸ್ತೆಗೆ ತಲುಪುತ್ತದೆ.

### 6ನೇ ವಾರ್ಡ್

ಕುವೆಂಪು ನಗರ (ಕುವೆಂಪು ವೃತ್ತದ) ಪಂಚಾಭಿಮುಖಿ ಗಣಪತಿ ದೇವಸ್ಥಾನ ವೃತ್ತದಿಂದ ಪ್ರಾರಂಭಗೊಂಡು ಕೆ.ಹೆಚ್.ಬಿ. ಕಚೇರಿ ರಸ್ತೆಯಲ್ಲಿ ಸಾಗಿ ಬಿ.ಎಂ.ರಸ್ತೆ ಕೃಷ್ಣ ಹೋಟೆಲ್ ಮೂಲಕ ಹೊಸ ಬಸ್ ನಿಲ್ದಾಣದ ಹತ್ತಿರ ರೈಲ್ವೆ ಗೇಟ್ ತಲುಪುವುದು. ಉತ್ತರಾಭಿಮುಖವಾಗಿ ಹೆಚ್.ಎನ್.ಪುರ ಹಾಸನ ರಸ್ತೆಯ ಮೂಲಕ ಎನ್.ಆರ್.ಸರ್ಕಲ್ ತಲುಪುತ್ತದೆ. ನಂತರ ಗಾಂಧಿಬಜಾರ್ ಮುಖ್ಯ ರಸ್ತೆಯ ನಿಲುವಾಗಿಲು ಅಂಜನೇಯಸ್ವಾಮಿ ದೇವಸ್ಥಾನದ ಮೂಲಕ ದೇವಿಗೆರೆ ಕೊಳದ ಪಕ್ಕದ ರಸ್ತೆಯಲ್ಲಿ ಸಾಗಿ ಕಸ್ತೂರಿಬಾ ರಸ್ತೆ ಮೂಲಕ ಮಹಾವೀರ ವೃತ್ತ ತಲುಪುತ್ತದೆ. ನಂತರ ಎ.ವಿ.ಕೆ ಕಾಲೇಜು ರಸ್ತೆಯಲ್ಲಿ ಸಾಗಿ ಚರ್ಚ್ ಹತ್ತಿರದ ವೃತ್ತಕ್ಕೆ ತಲುಪಿ ನಂತರ ಉತ್ತರಾಭಿಮುಖಾವಾಗಿ ಆರ್.ಸಿ.ರಸ್ತೆಯಲ್ಲಿ ಸಾಗಿ ಸ್ಲೇಟಸ್‌ಹಾಲ್ ವೃತ್ತಕ್ಕೆ ತಲುಪುತ್ತದೆ. ನಂತರ ಬಲಕ್ಕೆ ತಿರುಗಿ ದೊಡ್ಡಿರಸ್ತೆ ಮೂಲಕ ಸಂಪಿಗೆ ರಸ್ತೆಯಲ್ಲಿ ಸಾಗಿ ಮಸೀದಿ ವೃತ್ತ ತಲುಪುವುದು.

### 7ನೇ ವಾರ್ಡ್

ಪಂಚಮುಖಿ ಗಣಪತಿ ವೃತ್ತದಿಂದ ಪ್ರಾರಂಭಿಸಿ ಅರವಿಂದ ಶಾಲೆಯ ಮುಂಭಾಗದ ರಸ್ತೆಯಲ್ಲಿ ಹಾದು ರಾಜಕಾಲುವೆಯನ್ನು ಛೇದಿಸಿಕೊಂಡು ಮಿನಿವಿಧಾನಸೌಧದ ರಸ್ತೆಯಲ್ಲಿ ಸಾಗಿ, ನಂತರ ಕುವೆಂಪು ನಗರ ಕೆನರಾ ಬ್ಯಾಂಕ್‌ವರೆಗೆ ಸಾಗುವುದು. ನಂತರ ಬಲಕ್ಕೆ ಪೂರ್ವಾಭಿಮುಖವಾಗಿ ಆಡುವಳ್ಳಿ ಅರಳಿಮರದ ವೃತ್ತದಲ್ಲಿ ಸಾಗಿ ಬಿ.ಎಂ.ರಸ್ತೆಯ ಕೆಎಸ್ ಆರ್‌ಟಿಸಿ ಡಿಪೋ ಹತ್ತಿರ ಸೇರುತ್ತದೆ.

» ನಾಲ್ಕನೇ ಪುಟದಲ್ಲಿ

# ಪಾಕಿಸ್ತಾನದ ಇಬ್ಬರು ಭಯೋತ್ಪಾದಕರ ಹತ್ಯೆ

• ಪ್ರಜೋದಯ ವರದಿ

**ಜಮ್ಮು:** ಜೈಷ್‌ಎಮೊಹಮ್ಮದ್ ಸಂಘಟನೆಯ ಸ್ವಯಂ ಘೋಷಿತ ಉನ್ನತ ಕಮಾಂಡರ್ ಸೇರಿ ಇಬ್ಬರು ಪಾಕಿಸ್ತಾನಿ ಭಯೋತ್ಪಾದಕರನ್ನು ಭದ್ರತಾ ಪಡೆಗಳು ಜಮ್ಮು-ಕಾಶ್ಮೀರದಲ್ಲಿ ಬುಧವಾರ ಹತ್ಯೆ ಮಾಡಿವೆ.

ಗುಪ್ತಚರ ಮಾಹಿತಿಯ ಆಧಾರದಲ್ಲಿ ಪೊಲೀಸರು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಸಿಬ್ಬಂದಿ ರಾಮನಗರ ಮತ್ತು ಬಸಂತ್‌ಗಢದಲ್ಲಿ 20 ಗಂಟೆ ಕಾರ್ಯಾಚರಣೆ ನಡೆಸಿದ್ದಾರೆ. ಕಾರ್ಯಾಚರಣೆಗೆ ಕಿಯಾ ಎಂದು ಹೆಸರಿಡಲಾಗಿದೆ.

ಮಂಗಳವಾರ ಸಂಜೆ ಭಯೋತ್ಪಾದಕರು ಮತ್ತು ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ಆರಂಭಗೊಂಡಿತ್ತು. ಗುಹೆಯೊಳಗೆ ಅವಿತಿದ್ದ ಇಬ್ಬರನ್ನು ಹತ್ಯೆ ಮಾಡಲಾಗಿದೆ. ಎಂ4 ಕಾರ್ಬೈನ್, ಎ.ಕೆ. ಸರಣಿಯ ರೈಫಲ್ ಸೇರಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

# ರಾಮನಾಥಪುರ: ಇಂದಿನಿಂದ ತಂಬಾಕು ಹರಾಜು ಪುನರಾರಂಭ

ರವಿ ದುಮ್ಮಿ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಕಳೆದ ಎರಡು ವಾರಗಳಿಂದ ಸ್ಥಗಿತಗೊಂಡಿದ್ದ ಹರಾಜು ಪ್ರಕ್ರಿಯೆ ಫೆ.5 ರಂದು ಪುನರಾರಂಭವಾಗಲಿದ್ದು ರೈತರು ಉತ್ತಮ ಆದಾಯದ ನಿರೀಕ್ಷೆಯಲ್ಲಿದ್ದಾರೆ.

ಕೇಂದ್ರ ಸರ್ಕಾರ ತಂಬಾಕು ಮೇಲಿನ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ದರ ಏರಿಕೆ ಮಾಡಲು ಮುಂದಾಗಿರುವುದನ್ನು ವಿರೋಧಿಸಿ ಕಂಪನಿಗಳು ಜ. 23ರಿಂದ ಏಕಾಏಕಿ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದರು. ಇದರಿಂದ ರಾಮನಾಥಪುರ ಮಾರುಕಟ್ಟೆಯಲ್ಲಿ ಹೊಗೆಸೊಪ್ಪು ಮಾರಾಟ ಮಾಡಲು ಮುಂದಾಗಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು. ಮತ್ತೆ ತಂಬಾಕು ಖರೀದಿಸಲು ವರ್ತಕರು ಮುಂದಾಗಿದ್ದು ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ನೀಡಿದ ಬೆಲೆ



ರಾಮನಾಥಪುರ ತಂಬಾಕು ಮಾರುಕಟ್ಟೆಯ ಪ್ಲಾಟ್‌ಫಾರಂ 63ರಲ್ಲಿ ಕಳೆದ 81 ದಿನಗಳಿಂದ ನಡೆದ ಹರಾಜು ಪ್ರಕ್ರಿಯೆಯಲ್ಲಿ 31.88 ಲಕ್ಷ ಕೆ.ಜಿ. ಹೊಗೆಸೊಪ್ಪು ಕೊಳ್ಳಲಾಗಿದ್ದು, 90.69 ಕೋಟಿ ರೂ. ವಹಿವಾಟು ನಡೆದಿದೆ. ಒಂದು ಕೆಜಿ ಗುಣಮಟ್ಟದ ತಂಬಾಕಿಗೆ 320 ರೂ. ಮತ್ತು ಕನಿಷ್ಠ 210 ರೂ. ಹಾಗೂ ಸರಾಸರಿ 284 ರೂ. ನೀಡಲಾಗಿದೆ. ಫ್ಲಾಟ್ ಫಾರಂ 7ರಲ್ಲಿ 37.49 ಲಕ್ಷ ಕೆ.ಜಿ. ತಂಬಾಕು ಖರೀದಿಸಲಾಗಿದ್ದು, 10.68 ಕೋಟಿ ರೂ ವಹಿವಾಟು ನಡೆದಿದೆ. ಗರಿಷ್ಠ 321 ರೂ. ಮತ್ತು ಕನಿಷ್ಠ 210 ರೂ. ದರ ನೀಡಿದ್ದು ರೈತರಿಗೆ ಸರಾಸರಿ 285 ರೂ. ದರ ದೊರೆತಿದೆ.

ಯನ್ನು ಇಲ್ಲಿನ ಮಾರುಕಟ್ಟೆಯಲ್ಲಿ ಮುಂದುವರಿಸಬೇಕು. ಬೆಲೆ ತಾರತಮ್ಯ ಹೋಗಲಾಡಿಸಿ ರೈತರ ನೆರವಿಗೆ ಬರಬೇಕು ಎನ್ನುವುದು ರೈತರ ಒತ್ತಾಯವಾಗಿದೆ.

ಈ ಭಾಗದಲ್ಲಿ ತಂಬಾಕು ಉತ್ಪಾದಿಸಿರುವ ರೈತರು ಗ್ರೇಡಿಂಗ್ ಕಾರ್ಯ ಪೂರ್ಣಗೊಳಿ ಮಾರಾಟಕ್ಕಾಗಿ ಬೇಲ್‌ಗಳನ್ನೂ ಸಿದ್ದಪಡಿಸಿಕೊಂಡಿದ್ದರು. ಮಾರುಕಟ್ಟೆಯಲ್ಲಿ ಇದೇ ಮೊದಲ ಬಾರಿಗೆ ವರ್ತಕರು ಹರಾಜು ಸ್ಥಗಿತಗೊಳಿಸಿದ್ದರಿಂದ ರೈತರು ಆತಂಕಕ್ಕೆ ಒಳಗಾಗಿದ್ದರು. ಬೆಲೆ ಕುಸಿತ ವಿರೋಧಿಸಿ ರೈತರು ಪ್ರತಿಭಟನೆಗೆ ಇಳಿಯುವುದು ಸಾಮಾನ್ಯ, ಆದರೆ ಕಂಪನಿಗಳು ಹರಾಜು ಪ್ರಕ್ರಿಯೆಯಿಂದ ದೂರ ಉಳಿದಿದ್ದರಿಂದ ಉತ್ಪಾದಿತ ತಂಬಾಕು ಇಳುವರಿ ಕುಂಠಿತಗೊಳ್ಳುವ ಜತೆಗೆ ಬೆಳೆಗಾಗಿ ಮಾಡಿರುವ ಸಾಲ ತೀರಿಸಲು ಸಾಧ್ಯವಾಗದೆ ಆತಂಕದ ಸ್ಥಿತಿ ಎದುರಿಸುವಂತಾಗಿತ್ತು. ಬೆಳೆಗಾರರ ಹಿತ ಕಾಯಬೇಕಿದ್ದ ತಂಬಾಕು ಮಂಡಳಿ ಏಕಾಏಕಿ ಹರಾಜು ಸ್ಥಗಿತಗೊಳಿಸಿದ್ದ ಕಂಪನಿಗಳ ಬೆಂಬಲಕ್ಕೆ ನಿಂತಿದ್ದು ಕೂಡ ರೈತರ ಆಕ್ರೋಶಕ್ಕೆ ಕಾರಣವಾಗಿತ್ತು.

ಆಂಧ್ರಪ್ರದೇಶಕ್ಕೆ ಹೋಲಿಸಿದರೆ ಕರ್ನಾಟಕದಲ್ಲಿ ಉತ್ಕೃಷ್ಟ ದರ್ಜೆಯ ತಂಬಾಕು ಉತ್ಪಾದಿಸುತ್ತಿದ್ದು ವರ್ತಕರು ಇಲ್ಲಿನ ಮಾರುಕಟ್ಟೆಗಳಲ್ಲಿ ಬೆಲೆಯಲ್ಲಿ ತಾರಮತ್ಯ ಮಾಡುತ್ತಿದ್ದರೂ ಮಂಡಳಿ ಮಧ್ಯಪ್ರವೇಶಿಸಿ ರೈತರಿಗೆ ಆಗುತ್ತಿರುವ ಬೆಲೆ ತಾರತಮ್ಯ ನೀತಿ ಸರಿಪಡಿಸುವಲ್ಲಿ ವಿಫಲವಾಗುತ್ತಿದೆ. ಇದೀಗ ಕಂಪನಿಗಳು ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದರೂ ಮಂಡಳಿ ರೈತರ ಹಿತ ನಿರ್ಲಕ್ಷ್ಯಿಸಿದೆ. ಸಾಲ ಮಾಡಿ ಕಷ್ಟಪಟ್ಟು ತಂಬಾಕು ಉತ್ಪಾದಿಸಿದರೂ ನ್ಯಾಯಯುತ ದರ ಒದಗಿಸದೆ ರೈತರಿಗೆ ಕಿರುಕುಳ ನೀಡಲಾಗುತ್ತಿದೆ. ವರ್ತಕರ ತಾಳಕ್ಕೆ ತಕ್ಕಂತೆ ವರ್ತಿಸದೆ ಮಂಡಳಿ ಬೆಲೆ ತಾರತಮ್ಯ ಸರಿಪಡಿಸಬೇಕು ಎನ್ನುತ್ತಾರೆ ಬೆಳೆಗಾರರು.

ಮಾರುಕಟ್ಟೆಗೆ ತಂದ ಹೊಗೆಸೊಪ್ಪು ಬೇಲ್‌ಗಳನ್ನು ಸರಿಯಾಗಿ ಖರೀದಿಸುತ್ತಿಲ್ಲ. ಹರಾಜಿನ ಲ್ಲಿಯೂ ಗರಿಷ್ಠ ದರದ ಲಾಭ ಧಕ್ಕದೆ ಅನ್ಯಾಯವಾಗಿದೆ ಎಂದು ರೈತರು ಅವಲತ್ತುಕೊಳ್ಳುತ್ತಾರೆ.

ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಜ. 5ರಿಂದ ವರ್ತಕರು ಹರಾಜು ಪ್ರಕ್ರಿಯೆ ಪುನಾರಂಭಿಸಲಿದ್ದಾರೆ. ಕರ್ನಾಟಕದಲ್ಲಿ 40 ಮಿಲಿಯನ್ ಕೆಜಿ ಹೊಗೆಸೊಪ್ಪು ಕೊಳ್ಳಲಾಗಿದ್ದು ಈವರೆಗೆ ಶೇ. 45ರಿಂದ 50ರಷ್ಟು ತಂಬಾಕು ಖರೀದಿಸಲಾಗಿದೆ. ರೈತರು ಎಂದಿನತೆ ಹೊಗೆಸೊಪ್ಪು ಬೆಲ್‌ಗಳನ್ನು ಸಿದ್ದಪಡಿಸಿಕೊಂಡು ಮಾರಾಟಕ್ಕೆ ತರಬೇಕು.

– ಸವಿತಾ, ತಂಬಾಕು ಮಾರುಕಟ್ಟೆ ಹರಾಜು ಅಧೀಕ್ಷಕಿ.

ಮಂಡಳಿ ಇರುವುದು ಬೆಳೆಗಾರರ ಹಿತ ಕಾಯಲು. ಕೇಂದ್ರ ಸರ್ಕಾರ ಸಿಗರೇಟ್ ಮತ್ತು ತಂಬಾಕು ಉತ್ಪನ್ನಗಳ ಮೇಲೆ ಸುಂಕ ಏರಿಸಿದರೆ, ಸಿಗರೇಟ್ ಬೆಲೆ ಏರಿಕೆ ಮಾಡಲಾಗುತ್ತದೆ. ಆದರೆ ಮಾರುಕಟ್ಟೆಯಲ್ಲಿ ರೈತರು ಮಾರಾಟ ಮಾಡುವ ಹೊಗೆಸೊಪ್ಪಿಗೆ ವರ್ತಕರು ಬೆಲೆ ಏರಿಕೆ ಮಾಡುವುದಿಲ್ಲ. ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ತಂಬಾಕಿಗೆ ಬೆಲೆ ನೀಡಿದ ದರವನ್ನು ಇಲ್ಲಿಯ ಮಾರುಕಟ್ಟೆಯಲ್ಲಿಯೂ ಖರೀದಿಸಬೇಕು. ಮಂಡಳಿ ಬೆಳೆಗಾರರಿಗೆ ನ್ಯಾಯ ದೊರಕಿಸಿಕೊಡಬೇಕು.

–ಎಸ್.ವಿ. ಯೋಗಣ್ಣ, ಹೊಗೆಸೊಪ್ಪು ಬೆಳೆಗಾರ.

# ರಷ್ಯಾದಿಂದ ತೈಲ ಖರೀದಿಸಲ್ಲ

• ಪ್ರಜೋದಯ ವರದಿ

**ನವದೆಹಲಿ:** ಭಾರತದೊಂದಿಗಿನ ಹೊಸ ವ್ಯಾಪಾರ ಒಪ್ಪಂದವನ್ನು ಶ್ವೇತಭವನ ಶ್ಲಾಘಿಸಿದ್ದು, ಭಾರತ ಇನ್ನು ಮುಂದೆ ರಷ್ಯಾದ ತೈಲವನ್ನು ಖರೀದಿಸುವುದಿಲ್ಲ ಹಾಗು ಪ್ರಧಾನಿ ನರೇಂದ್ರ ಮೋದಿ ಕೂಡ ಅಮೇರಿಕಾದ ಪ್ರಮುಖ ವಲಯಗಳಲ್ಲಿ ಸುಮಾರು 41.50 ಲಕ್ಷ ಕೋಟಿ ರೂ. (500 ಬಿಲಿಯನ್) ಹೂಡಿಕೆಗೆ ಒಪ್ಪಿಗೆ ನೀಡಿದ್ದಾರೆಂದು ಶ್ವೇತಭವನ ಅಧಿಕೃತ ಹೇಳಿಕೆ ನೀಡಿದೆ.

ಈ ಕುರಿತು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಅವರು ಸುದ್ದಿಗೋಷ್ಠಿ ನಡೆಸಿ ಮಾಹಿತಿ ಹಂಚಿಕೊಂಡಿದ್ದಾರೆ. ನಮ್ಮ ಅಧ್ಯಕ್ಷರು ಭಾರತದೊಂದಿಗೆ ಮತ್ತೊಂದು ಉತ್ತಮ ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಅವರು ಪ್ರಧಾನಿ ಮೋದಿಯವರೊಂದಿಗೆ ನೇರವಾಗಿ ಮಾತನಾಡಿದ್ದು, ಉಭಯ ದೇಶಗಳು ಉತ್ತಮ ವ್ಯಾಪಾರ ಸಂಬಂಧದ ಕುರಿತು ಹಂಚಿಕೊಂಡಿದ್ದಾರೆ. ಭಾರತವು ಇನ್ನು ಮುಂದೆ ರಷ್ಯಾ, ವೆನುಜುವೆಲಾದಿಂದ ತೈಲವನ್ನು ಖರೀದಿಸುವುದಿಲ್ಲ. ಬದಲಿಗೆ ಅಮೇರಿಕಾದಿಂದ ತೈಲ ಖರೀದಿಸಲು ಬದ್ಧವಾಗಿದೆ. ಅದರಿಂದ ಅಮೇರಿಕಾ ಜನರಿಗೆ



ಪ್ರಯೋಜನವಾಗಲಿದೆ ಎಂದರು.

ಅಲ್ಲದೆ, ಪ್ರಧಾನಿ ಮೋದಿಯವರು ಸಾರಿಗೆ, ಇಂಧನ ಮತ್ತು ಕೃಷಿ ಉತ್ಪನ್ನಗಳು ಸೇರಿ ಅಮೇರಿಕಾದ ಪ್ರಮುಖ ವಲಯಗಳಲ್ಲಿ ಸುಮಾರು 41.50 ಲಕ್ಷ ಕೋಟಿ ರೂ. ಹೂಡಿಕೆಗೆ ಬದ್ಧರಾಗಿದ್ದಾರೆ. ಈ ಅತ್ಯುತ್ತಮ ಒಪ್ಪಂದಕ್ಕಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದ ತಿಳಿಸುತ್ತೇವೆ ಎಂದಿದ್ದಾರೆ. ಸೋಮವಾರದಂದು ಭಾರತ ಹಾಗು ಅಮೇರಿಕಾ ನಡುವಿನ ನೂತನ ವ್ಯಾಪಾರ ಒಪ್ಪಂದದ ಕುರಿತು ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಕ್ಷಣವೇ ಜಾರಿಗೆ ಬರುವಂತೆ, ಎರಡೂ ಕಡೆಯವರು ವ್ಯಾಪಾರ ಒಪ್ಪಂದಕ್ಕೆ ಒಪ್ಪಿಕೊಂಡಿರುವುದಾಗಿ ಮಾಹಿತಿ ನೀಡಿದ್ದರು. ಅದರಂತೆ ಅಮೇರಿಕಾವು ಭಾರತದ ಮೇಲೆ ವಿಧಿಸಿದ್ದ ಸುಂಕವನ್ನು ಶೇ. 25 ರಿಂದ 18ಕ್ಕೆ ಇಳಿಸಿದೆ.

# ಅರೇಬಿಕಾ ಕಾಫಿ ಧಾರಣೆ ಕುಸಿತ-ರೊಬಸ್ಟಾ ಏರಿಕೆ

• ಪ್ರಜೋದಯ ವರದಿ

**ಹಾಸನ:** ಕಾಫಿ ಧಾರಣೆ ಏರಿಳಿತ ಕಾಣುತ್ತಲೇ ಸಾಗುತ್ತಿದೆ. ಅರೇಬಿಕಾ ಕಾಫಿ ಧಾರಣೆ ಕುಸಿತ ಕಂಡರೇ, ರೋಬಸ್ಟಾ ಕಾಫಿ ಧಾರಣೆ ಕೊಂಚ ಏರಿಕೆ ಕಂಡಿದೆ.

ಜನವರಿ ತಿಂಗಳ ಎರಡನೇ ವಾರದಲ್ಲಿ ಅರೇಬಿಕಾ ಪಾರ್ಚ್‌ಮೆಂಟ್‌ಗೆ 26,500 ರೂ., ಅರೇಬಿಕಾ ಚರಿ 14,000 ರೂ., ರೋಬಸ್ಟಾ ಪಾರ್ಚ್‌ಮೆಂಟ್ 17,000ರೂ., ರೋಬಸ್ಟಾ ಚರಿ 9,000 ರೂ. ಇದೆ. ರೋಬಸ್ಟಾ ಕಾಫಿ ಧಾರಣೆಯಲ್ಲಿ ಕೊಂಚ ಏರಿಳಿತ ಕಂಡು ಬಂದರೂ, ಅರೇಬಿಕಾ ಕಾಫಿ ಬೆಲೆಯಲ್ಲಿ ಯಾವುದೇ ಬದಲಾವಣೆ ಕಂಡು ಬಂದಿರಲಿಲ್ಲ.

ಆದರೆ, ಫೆಬ್ರವರಿ ಮೊದಲ ವಾರದಲ್ಲಿ ಅರೇಬಿಕಾ ಕಾಫಿ ಧಾರಣೆ ಕುಸಿತ ಕಂಡಿದೆ. 26,500 ರೂ. ಇದ್ದ



ಬೆಲೆ 24,500 ರಿಂದ 25 ಸಾವಿರ ರೂ.ಗೆ ಕುಸಿತ ಕಂಡಿದೆ. ರೋಬಸ್ಟಾ ರೋಬಸ್ಟಾ ಪಾರ್ಚ್‌ಮೆಂಟ್ 17,000 ರೂ. ನಿಂದ 18 ಸಾವಿರ ರೂ.ಗಳಿಗೆ ಜಿಗಿತ ಕಂಡಿದೆ. ಅದೇ ರೀತಿ ರೋಬಸ್ಟಾ ಚರಿ 9,500ರೂ. ನಿಂದ 10 ಸಾವಿರ ರೂ.ಗಳಿಗೆ ತಲುಪಿದೆ.

(ಬುಧವಾರದ ಕಾಫಿ ಧಾರಣೆ : 50 ಕೆ.ಜಿ.ಗೆ)

| ಟ್ರೇಡರ್ಸ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ವೆಸ್ಟರ್ನ್ ಕಾಫಿ | 25,500 | 13,600 | 18,000 | 10,000 |
| ಬಾಳ್ಳುಪೇಟೆ | 24,700 | 12,500 | 17,500 | 09,700 |
| ಲಿಖಿತ್‌ಕಾಫಿ ಸಕಲೇಶಪುರ | 25,000 | 13,200 | 18,000 | 09,600 |
| ಕುಂಬಾರಳ್ಳಿ ಸಕಲೇಶಪುರ | 25,000 | 13,000 | 17,800 | 09,500 |
| ಗೀತಾಕಾಫಿ ಬಾಳ್ಳುಪೇಟೆ | 24,700 | 12,800 | 17,700 | 09,700 |
| ಕೊಡ್ಲಿಪೇಟೆ | 24,600 | 13,000 | 17,800 | 09,500 |
| ಹಾಸನ | 24,500 | 13,900 | 00 | 00 |
| ಸೋಮವಾರಪೇಟೆ | 24,750 | 13,600 | 00 | 00 |

# ಜಿಲ್ಲಾ ಪ್ರಾಧಿಕಾರ ನಿರ್ದೇಶಕರ ಚುನಾವಣೆ: ಕಾಂಗ್ರೆಸ್‌ಗೆ ಮುಖಭಂಗ

• ಪ್ರಜೋದಯ ವರದಿ

**ಬೇಲೂರು:** ಹಾಸನ ಜಿಲ್ಲಾ ಪ್ರಾಧಿಕಾರ ಸದಸ್ಯರ ಚುನಾವಣೆಯಲ್ಲಿ ಜೆಡಿಎಸ್ ಸದಸ್ಯ ಶ್ರೀನಿವಾಸ್ ಗೆಲುವು ಸಾಧಿಸಿದ್ದರೆ, ಹಾಸನ ಜಿಲ್ಲಾ ಪ್ರಾಧಿಕಾರ ನಿರ್ದೇಶಕರ ಚುನಾವಣೆಯಲ್ಲಿ ಪುರಸಭೆ ಸದಸ್ಯರಾದ ಶೈಲೇಶ್ ಅವರು ಸ್ಪರ್ಧಿಸಿ ಜಯ ಸಾಧಿಸಿದ್ದಾರೆ.

ಮೂವರು ಸದಸ್ಯರು ಸ್ಪರ್ಧಿಸಿದ್ದ ಈ ಚುನಾವಣೆಯಲ್ಲಿ ಎರಡು ಸ್ಥಾನಗಳಿಗೆ ಅವಕಾಶವಿದ್ದು, ಪುರಸಭೆ ಸದಸ್ಯರಾದ ಕಾಂಗ್ರೆಸ್‌ನ ಮೀನಾಕ್ಷಿ ವೆಂಕಟೇಶ್ ಹಾಗೂ ಜೆಡಿಎಸ್‌ನ ಶೈಲೇಶ್ ಅವರು ವಿಜಯಿಯಾಗಿದ್ದು, ಕಾಂಗ್ರೆಸ್‌ನ ಜಮಾಲುದ್ದೀನ್ ಅವರು ಸೋಲು ಕಂಡಿದ್ದಾರೆ. 17 ಜನ ಕಾಂಗ್ರೆಸ್ ಸದಸ್ಯರಿದ್ದರೂ ಸಹ ಕಾಂಗ್ರೆಸ್ ಅಭ್ಯರ್ಥಿಗೆ ಜಯ ದೊರೆಯದಿರುವುದು ಕಾಂಗ್ರೆಸ್



ಪಕ್ಷಕ್ಕೆ ತೀವ್ರ ಮುಖಭಂಗ ಉಂಟು ಮಾಡಿದೆ ಎನ್ನಲಾಗಿದೆ.

ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಎ.ಆರ್.ಅಶೋಕ್ ಮಾತನಾಡಿ, ಬಿ.ಶಿವರಾಂ ಅವರ ಕುತಂತ್ರದಿಂದ ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲಾಗಿತ್ತು. ಪುರಸಭೆಯಲ್ಲಿ ಸಭೆ ನಡೆಯುವಾಗ ಟೇಬಲ್‌ಚೇರ್ ಒಡೆದು ಗಲಾಟೆ ಸೃಷ್ಟಿಸಲಾಗಿತ್ತು. ನಮ್ಮ ಜೊತೆ ನಿಂತವರು ಕೆಲವರು ಮಾತ್ರ, ಇಂದು ಅವರು ಗೆದ್ದಿದ್ದಾರೆ. ಇದು ಸತ್ಯಕ್ಕೆ ದೊರೆತ ಜಯ, ಕಾಂಗ್ರೆಸ್ ಪಕ್ಷದ ಶಿವರಾಂ ಅವರಿಗೆ ಈ ಚುನಾವಣೆಯಲ್ಲಿ ತೀವ್ರ ಮುಖಭಂಗವಾಗಿದೆ ಮುಂದೆಯೂ ಇದೇ ಗತಿ ಎಂದು ಅವರು ಹೇಳಿದರು.

ನನ್ನ ಸದಸ್ಯತ್ವವನ್ನು ರದ್ದುಪಡಿಸಬೇಕು ಎಂದು ಕೆಲವರು ಹುನ್ನಾರ ನಡೆಸಿದ್ದರು. ಆದರೆ ಅದು ಸಂಪೂರ್ಣ ವಿಫಲವಾಗಿದೆ. ನ್ಯಾಯಾಲಯ ಸತ್ಯವನ್ನು ತಿಳಿದು ನನ್ನ ಪರವಾಗಿ ತೀರ್ಪು ನೀಡಿದೆ. ಮುಂದಿನ ದಿನಗಳಲ್ಲಿ ಹೈಕೋರ್ಟ್‌ನಲ್ಲೂ ಜಯ ದೊರೆತರೆ, ಮತ್ತೆ ಪುರಸಭೆ ಅಧ್ಯಕ್ಷನಾಗಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಪುರಸಭೆ ಜೆಡಿಎಸ್ ಸದಸ್ಯ ಜಗದೀಶ್ ಮಾತನಾಡಿ, ಜಿಲ್ಲಾ ಪ್ರಾಧಿಕಾರದ ನಿರ್ದೇಶಕರು ವಿಜೇತರಾಗಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಇಬ್ಬರು ಹಾಗೂ ಜೆಡಿಎಸ್‌ನಿಂದ ಒಬ್ಬರು ಸ್ಪರ್ಧಿಸಿದ್ದರು. ಅದರಲ್ಲೂ ಒಂದು ಸ್ಥಾನವನ್ನು ನಾವು ಗೆದ್ದಿದ್ದೇವೆ. ಕಾಂಗ್ರೆಸ್ ಒಂದು ಸ್ಥಾನ ಗೆದ್ದರೂ, ಪುರಸಭೆ ಆಡಳಿತದಲ್ಲಿರುವ ಕಾಂಗ್ರೆಸ್ ಅಭ್ಯರ್ಥಿಯೊಬ್ಬರು ಸೋತಿರುವುದು ಅವರಿಗೆ ದೊಡ್ಡ ಆಘಾತವಾಗಿದೆ ಎಂದು ಅವರು ಹೇಳಿದರು.

ಹಾಸನ ಜಿಲ್ಲಾ ಪ್ರಾಧಿಕಾರದ ನಿರ್ದೇಶಕರಾಗಿ ಆಯ್ಕೆಯಾದ ಜೆಡಿಎಸ್ ಸದಸ್ಯ ಶೈಲೇಶ್ ಮಾತನಾಡಿ ಜಾತಿ ಭೇದ ಪಕ್ಷ ಮರೆತು ನನ್ನನ್ನು ಆಯ್ಕೆ ಮಾಡಿದ ಪುರಸಭೆಯ ಎಲ್ಲ ಸದಸ್ಯರಿಗೂ ಧನ್ಯವಾದಗಳು. ನಮ್ಮ ಪಕ್ಷದ ಹಿರಿಯ ಮುಖಂಡರು ಮತ್ತು ಎಲ್ಲರ ಸಹಕಾರವನ್ನು ಪಡೆದು ಹಾಸನ ಜಿಲ್ಲಾ ಪ್ರಾಧಿಕಾರದ ಅಭಿವೃದ್ಧಿಗೆ ಕೈ ಜೋಡಿಸುತ್ತೇನೆ ಎಂದು ಅವರು ಹೇಳಿದರು.

ಜೆಡಿಎಸ್ ಸದಸ್ಯರು ಮತ್ತು ಕಾರ್ಯಕರ್ತರು ಹಾಗೂ ಮುಖಂಡರು ಬಸವೇಶ್ವರ ವೃತ್ತದ ಬಳಿ ಸಿಹಿ ಹಂಚಿ ಪಟಾಕಿ ಸಿಡಿಸಿದರು.

# ವಿವೇಕಾನಂದರ ತತ್ವ, ಸಿದ್ಧಾಂತಗಳು ಯುವಕರಿಗೆ ಮಾದರಿ

## ಸನಾತನ ಧರ್ಮವನ್ನು ರಕ್ಷಿಸಿ, ಪೋಷಿಸುವ ಹೊಣೆ ನಮ್ಮೆಲ್ಲರ ಕರ್ತವ್ಯ

• ಪ್ರಜೋದಯ ವರದಿ

ಹೊಳೆನರಸೀಪುರ: ಭಾರತದ ಶ್ರೇಷ್ಠ ಸಂಸ್ಕೃತಿ ಮತ್ತು ಪರಂಪರೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವ ತಂದುಕೊಟ್ಟವರು ಸ್ವಾಮಿ ವಿವೇಕಾನಂದರು ಎಂದು ಬೆಂಗಳೂರಿನ ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರು ತಿಳಿಸಿದರು.

ಪಟ್ಟಣದಲ್ಲಿ ನಡೆದ ಸಮಾಜೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ವಿವೇಕಾನಂದರ ತತ್ವ, ಸಿದ್ಧಾಂತಗಳು, ದೇಶಪ್ರೇಮ ಎಂದೆಂದಿಗೂ ಯುವಕರಿಗೆ ಮಾದರಿಯಾಗಿದೆ. ಈ ದೇಶವನ್ನು ಸದೃಢಗೊಳಿಸುವಲ್ಲಿ ಅನೇಕ ಸಾಧು, ಸಂತರು ನಡೆಸಿದ ಅವಿರತ ಶ್ರಮ ಸ್ಮರಣಮಾನ್ಯವಾಗಿದೆ. ಮೌಲ್ಯಯುತವಾದ ಸನಾತನ ಧರ್ಮವನ್ನು ರಕ್ಷಿಸಿ, ಪೋಷಿಸುವ ಹೊಣೆ ನಮ್ಮೆಲ್ಲರ ಕರ್ತವ್ಯವಾಗಿದೆ. ದೇಶಪ್ರೇಮ ಬೆಳೆಸಿಕೊಳ್ಳುವ ಜತೆಗೆ ನಮ್ಮ ನೆಲದ ಕಾನೂನನ್ನು ಅನುಸರಿಸಬೇಕು. ನಮ್ಮ ದೇಶದ ಪವಿತ್ರ ಗ್ರಂಥಗಳಾದ ಭಗವದ್ಗೀತೆ, ರಾಮಾಯಣಗಳನ್ನು ಅಧ್ಯಯನ ಮಾಡಬೇಕು. ಅದರಲ್ಲಿನ ಆಶಯಗಳನ್ನು ಪ್ರತಿ ಯುವಕರೂ ಅರಿಯಬೇಕು. ಮತ್ತೊಂದು ಬಾರಿ ನಮ್ಮ ದೇಶದ ಸಂಸ್ಕೃತಿಯನ್ನು ಪ್ರಖರಗೊಳಿಸುವ ಕಾಲ ಸಂಭವಿಸಲಿದೆ ಎಂದರು.

ಆರ್‌ಎಸ್‌ಎಸ್ ಕ್ಷೇತ್ರಿಯ ಸಂಪರ್ಕ ಪ್ರಮುಖ್ ಟಿ.ಎಸ್.ವೆಂಕಟೇಶ್ ಅವರು ಮಾತನಾಡಿ, ಹಿಂದೂ ಎಂದರೆ ನಾವೆಲ್ಲರೂ ಒಂದು ಎನ್ನುವ ಆತ್ಮ ಮನೋಭಾವ ಈ ರಾಷ್ಟ್ರದ ನೆಲಗಟ್ಟಿನ




ಪ್ರತಿಯೊಬ್ಬರಲ್ಲೂ ಬೇರೂರಬೇಕು. ನೆಲ, ಜಲ, ಗಡಿ ವಿವಾದಗಳಿಗೆ ನಮ್ಮ ನಮ್ಮಲ್ಲೇ ಆಂತರೀಕ ಕಚ್ಚಾಟ ಸಾಕು. ಜಾತಿ, ಭಾಷೆ, ಸಂಪ್ರದಾಯ ಇವುಗಳ ವಿಂಗಡಣೆ ಸಾಕು. ವಸುದೇವ ಕುಟುಂಬಕಂ ಎಂಬ ಘೋಷ ವಾಕ್ಯದ ಸಾರದಂತೆ ನಡೆಯೋಣ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಶತಮಾನೋತ್ಸವ ಆಚರಿಸುತ್ತಿರುವ ಪ್ರಯುಕ್ತ ಸಾಮಾಜಿಕ ಪರಿಕಲ್ಪನೆ ಇರಿಸಿ ಕಾರ್ಯ ರೂಪಿಸಿದೆ. ಪಂಚ ಪರಿವರ್ತನೆ ಎಂಬ ಸಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿತನ ಹಾಗೂ ನಾಗರೀಕ ಕರ್ತವ್ಯ ಎಂಬ ಅಂಶಗಳ ಕಾರ್ಯಸೂಚಿ ಅನುಸರಿಸಿ ಧನಾತ್ಮಕ ಬದಲಾವಣೆಗೆ ಪ್ರಯತ್ನ ನಡೆಸಲಾಗುವುದು ಎಂದರು.

ಶ್ರೀಗಳು ಆಶೀರ್ವಚನಕ್ಕೂ ಮುನ್ನ ಭಾರತ ಮಾತೆಗೆ ಪುಷ್ಪಾರ್ಚನೆ ನಡೆಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಯುವಕರು ಬೈಕ್ ಮೂಲಕ ಪಟ್ಟಣದಲ್ಲೆಡೆ ಸಂಚರಿಸಿ ಕೇಸರಿ ಧ್ವಜ ಹಿಡಿದು ರ್‍ಯಾಲಿ ನಡೆಸಿ ಸಂಚಲನ ಮೂಡಿಸಿದರು.

ಆರ್‌ಎಸ್‌ಎಸ್ ಸಂಘಟಕ ಹೊ.ಸು.ರಮೇಶ್, ಅನುಪಮ ನಿಲೇಶ್ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂ ಕಾರ್ಯಕರ್ತರು ಹಾಜರಿದ್ದರು.

# ಬಾಲ ಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನ

ಹಾಸನ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 2024-25 ಹಾಗೂ 2025-26ನೇ ಸಾಲಿನಲ್ಲಿ ಮಕ್ಕಳು ಕ್ರೀಡಾ ಸಂಗೀತ, ಬಹುಮುಖ ಪ್ರತಿಭೆ, ನಟನೆ. ಚಿತ್ರಕಲೆ ಹಾಗೂ ವಿಜ್ಞಾನ ಮತ್ತು ಸಂಶೋಧನೆಯಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಯಾವುದಾದರೂ ಒಂದು ಕ್ಷೇತ್ರದಲ್ಲಿ ಸಾಧನೆಗೈದ 18 ವರ್ಷದೊಳಗಿನ ಮಕ್ಕಳಿಂದ ಬಾಲ ಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವವಿವರದ ಅರ್ಜಿಯನ್ನು ಫೆ. 10 ರೊಳಗಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಕೆ.ಆರ್. ಮರಂ, ಹಾಸನ ಇವರಿಗೆ ಸಲ್ಲಿಸಬಹುದಾಗಿದೆ.

ಮಾಹಿತಿಗೆ ದೂ.ಸಂ.: 08172-267218 ನ್ನು ಸಂಪರ್ಕಿಸಬಹುದು.

# ಅಬಕಾರಿ ಹಗರಣಕ್ಕೆ ಕಲಾಪ ಬಲಿ

» ಮೊದಲನೇ ಪುಟದಿಂದ

ಅಬಕಾರಿ ಇಲಾಖೆಯಲ್ಲಿನ ಹಗರಣಕ್ಕೆ ಸಂಬಂಧಿಸಿದ ಆಡಿಯೋ ಸಾಕ್ಷ್ಯಗಳನ್ನು ಒಳಗೊಂಡ ಮೂರು ಪೆನ್‌ಡ್ರೈವ್‌ಗಳನ್ನು ಸದನದಲ್ಲಿ ನಾನು ನೀಡಿದ್ದೇನೆ. ಅಬಕಾರಿ ಉಪ ಆಯುಕ್ತರೊಬ್ಬರು ಸಚಿವರಿಗೆ ಕಮಿಷನ್ ಹೋಗುತ್ತದೆ ಎಂಬ ಹೇಳಿಕೆ ನೀಡಿದ್ದಾರೆ. ತಿಮ್ಮಾಪುರ ಅವರ ರಾಜೀನಾಮೆ ಪಡೆದು ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

**ರಾಜೀನಾಮೆ ನೀಡುವುದಿಲ್ಲ**

ನಾನು ಅಬಕಾರಿ ಸಚಿವನಾದ ಮೇಲೆ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿದ್ದೇನೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿದ್ದೇನೆ. ನಾನು ಪ್ರಕ್ರಿಯೆಯನ್ನು ಸರಳೀಕರಿಸಿದೆ ಮತ್ತು ಕೌನ್ಸೆಲಿಂಗ್ ವ್ಯವಸ್ಥೆಯನ್ನು ತಂದಿದ್ದೇನೆ. 25 ಲ. ರೂ. ಲಂಚ ಪಡೆದ ಆರೋಪದ ಮೇಲೆ ಲೋಕಾಯುಕ್ತರಿಂದ ಸಿಕ್ಕಿ ಬಿದ್ದ ಅಧಿಕಾರಿಯೊಬ್ಬರು ನನ್ನ ಹೆಸರು ಉಲ್ಲೇಖಿಸಿದ್ದಾರೆಂದು ಹೇಳಿಕೊಂಡ ಆಡಿಯೋ ಕ್ಲಿಪ್ ಮೂಲಕ ಬಿಜೆಪಿ ಆರೋಪ ಮಾಡುತ್ತಿದೆ. ಅಧಿಕಾರಿ ನನ್ನ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ಅವರು ಆರೋಪಿಸಿದರು.

ಬಿ.ಜೆ.ಪಿ. ಆಳ್ವಿಕೆಯಲ್ಲಿ ನಡೆದ ಹಗರಣಗಳನ್ನು ಪಟ್ಟಿ ಮಾಡಿದ ಸಚಿವರು, ಎಷ್ಟು ಸಚಿವರು ಆಗ ರಾಜೀನಾಮೆ ನೀಡಿದ್ದರು, ಯಾರೂ ರಾಜೀನಾಮೆ ನೀಡಿಲ್ಲ. ಮುಖ್ಯಮಂತ್ರಿ ಜೊತೆ ಚರ್ಚಿಸಿದ ನಂತರ ನಾನು ಅನೇಕ ಸುಧಾರಣೆಗಳನ್ನು ಪರಿಚಯಿಸಿದೆ. ನಾನು ಯಾವ ತಪ್ಪು ಮಾಡಿದ್ದೇನೆ. ಭ್ರಷ್ಟಾಚಾರದಲ್ಲಿ ನಾನು ಭಾಗಿಯಾಗಿದ್ದೇನೆ ಎನ್ನುವುದು ಸುಳ್ಳು ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

# ಮಂಜುನಾಥಸ್ವಾಮಿ ಸಂಘಕ್ಕೆ ರಾಜಶೇಖರ್ ಅಧ್ಯಕ್ಷ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ ಅಧ್ಯಕ್ಷ ಸ್ಥಾನಕ್ಕೆ ರಾಜಶೇಖರ್ (ಕೇಶವ್) ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಅಣ್ಣಸ್ವಾಮಿ ಅವರು ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ನಡೆದು ಅಧ್ಯಕ್ಷ ಸ್ಥಾನಕ್ಕೆ ರಾಜಶೇಖರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಅಣ್ಣಸ್ವಾಮಿ ಹೊರತುಪಡಿಸಿ ಮತ್ತ್ಯಾರು ನಾಮಪತ್ರ ಸಲ್ಲಿಸದ ಕಾರಣ ಈ ಇಬ್ಬರನ್ನು ಅವಿರೋಧವಾಗಿ ಆಯ್ಕೆ ಮಾಡಿ ಚುನಾವಣಾ ಅಧಿಕಾರಿ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ರಾಜಶೇಖರ್



ಮಾತನಾಡಿ, ಯಾವುದೇ ಸಂಘ ಸಂಸ್ಥೆಗಳು ಪಾರದರ್ಶಕ ವ್ಯವಹಾರ ಹೊಂದಿದ್ದಲ್ಲಿ ಮಾತ್ರ ಪ್ರಗತಿ ಸಾಧಿಸಲು ಸಾಧ್ಯ ಎಂದು ಸಲಹೆ ನೀಡಿದರು.

ಸಂಘದ ಎಲ್ಲಾ ಸದಸ್ಯರ ವಿಶ್ವಾಸ ಪಡೆದು ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು. ಹೆಚ್ಚಿನ ಲಾಭ ಗಳಿಸುವುದರ ಜೊತೆಗೆ ಸದಸ್ಯರ ಕ್ಷೇಮಾಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಅವಿರೋಧವಾಗಿ ಆಯ್ಕೆಯಾದ ರಾಜಶೇಖರ್ ಹಾಗೂ ಅಣ್ಣಸ್ವಾಮಿ ಅವರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು.

ಕಾರ್ಯದರ್ಶಿಆರ್.ಎನ್.ಸ್ವಾಮಿ, ಖಜಾಂಚಿ ಕೃಷ್ಣ, ನಿಕಟಪೂರ್ವ ಅಧ್ಯಕ್ಷ ಕಾಂತರಾಜು, ನಿರ್ದೇಶಕರಾದ ಅರುಣ, ನಾಗರಾಜು, ರಮ್ಯಾ, ಮಂಜು, ಲತಾ, ಮಂಜು, ನವೀನ್ ಹಾಗೂ ಇತರರು ಇದ್ದರು.

# ಫೆ.10 ರಂದು ಬಜೆಟ್ ಪೂರ್ವಭಾವಿ ಸಭೆ

**ಅರಸೀಕೆರೆ:** ನಗರಸಭೆ ವತಿಯಿಂದ 2026-27ನೇ ಸಾಲಿನ ಕರಡು ಆಯವ್ಯಯವನ್ನು ಕರ್ನಾಟಕ ಪೌರಸಭೆಗಳ ಲೆಕ್ಕ ಪದ್ಧತಿ ಮತ್ತು ಬಜೆಟ್ ನಿಯಮಗಳು 2006 ಭಾಗ 24 ನಿಯಮ 133 ರ ಪ್ರಕರ ತಯಾರಿಸಲು ಜಿಲ್ಲಾಧಿಕಾರಿಗಳು ಹಾಗೂ ಅರಸೀಕೆರೆ ನಗರಸಭೆಯ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫೆ.10 ರಂದು ಬೆಳಿಗ್ಗೆ 11 ಗಂಟೆಗೆ ಆಯವ್ಯಮ ಪೂರ್ವಭಾವಿ ಸಭೆ ಮತ್ತು ಜನಸ್ಪಂದನ ಕಾರ್ಯಕ್ರಮವನ್ನು ಅರಸೀಕೆರೆ ನಗರಸಭೆಯ ಕಚೇರಿ ಆವರಣದಲ್ಲಿ ಏರ್ಪಡಿಸಲಾಗಿದೆ.

ವಿವಿಧ ಸಂಘ ಸಂಸ್ಥೆಯ ಪ್ರತಿನಿಧಿಗಳು, ಸಾರ್ವಜನಿಕರು, ಪತ್ರಕರ್ತರು ಸಭೆಗೆ ಆಗಮಿಸಿ ಸಲಾಹೆ ಸೂಚನೆಗಳನ್ನು ನೀಡುವಂತೆ ಹಾಗೂ ಕುಂದುಕೊರತೆಗಳನ್ನು ಸಲ್ಲಿಸಬಹುದಾಗಿದೆ ಎಂದು ಪೌರಾಯುಕ್ತರು ತಿಳಿಸಿದ್ದಾರೆ.

# ಮಹಿಳೆಯರ ಲೆದರ್ ಬಾಲ್ ಕ್ರಿಕೆಟ್: ಬೆಂಗಳೂರು ಪ್ರಥಮ

• ಪ್ರಜೋದಯ ವರದಿ

**ಹಾಸನ:** ಟೈಮ್ಸ್ ಸ್ಪೋರ್ಟ್ಸ್ ಅಕಾಡೆಮಿ ಹಾಗೂ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ನಡೆದ ಟೈಮ್ಸ್ ಕಪ್ ಸೀಸನ್ 2ನೇ ರಾಜ್ಯಮಟ್ಟದ ಮಹಿಳೆಯರ ಲೆದರ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಂಗಳೂರಿನ ಕೆ.ಐ.ಓ.ಸಿ ಬೆಂಗಳೂರು ತಂಡ ಪ್ರಥಮ ಬಹುಮಾನ ಪಡೆದುಕೊಂಡಿದೆ.

ನಗರದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ ನಡೆದ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಗೆ ಯುವತಿಯರ ಸುಮಾರು 8 ಮಹಿಳಾ ತಂಡಗಳು ಭಾಗವಹಿಸಿದ್ದವು. ಅಂತಿಮ ಹಣಾಹಣಿಯಲ್ಲಿ ಬೆಂಗಳೂರಿನ ಕೆ.ಐ.ಓ.ಸಿ ತಂಡ ಹಾಗೂ ಗೋಲ್ಡನ್ ರಾಯ್ ತಂಡಗಳ ನಡುವೆ ಸೆಣಸಾಟ ನಡೆಸಿ ಅಂತಿಮವಾಗಿ ಬೆಂಗಳೂರಿನ ತಂಡಗಳಾದ



ಕೆ.ಐ.ಓ.ಸಿ ಪ್ರಥಮ ಹಾಗೂ ದ್ವಿತೀಯ ಬಹುಮಾನವನ್ನ ರಾಯ್ ತಂಡ ಪಡೆದುಕೊಂಡಿತು. ಒಟ್ಟು ಆರು ದಿನಗಳ ಕಾಲ ಈ ಕ್ರೀಡಾಕೂಟ ನಡೆದಿದ್ದು, ಬಂದಿದ್ದ ಎಲ್ಲಾ ತಂಡಗಳ ಆಟಗಾರರಿಗೆ ಸೂಕ್ತವಾಗಿ ವಸತಿ ವ್ಯವಸ್ಥೆ ಹಾಗೂ ಇನ್ನಿತರ ವ್ಯವಸ್ಥೆಯನ್ನು ಟೈಮ್ಸ್ ಅಕಾಡೆಮಿ ಹಾಗೂ ರೋಟರಿ ಸಹಯೋಗದಲ್ಲಿ ಮಾಡಲಾಗಿತ್ತು.

ಕ್ರೀಡಾಕೂಟಕ್ಕೆ ಚಾಲನೆ ನೀಡಿದ ರೋಟರಿ ಜೋನ್ 9ರ ಸಹಾಯಕ ಗವರ್ನರ್ ಜಿ.ಎನ್.ಮಂಜುನಾಥ್ ಮಾತನಾಡಿ, ಮಹಿಳೆಯರ ಕ್ರಿಕೆಟ್ ಇಂದು ಹೆಚ್ಚು ಜನರನ್ನು ಆಕರ್ಷಿಸುತ್ತಿದ್ದು, ಪುರಷರ ಕ್ರೀಡಾಕೂಟಕ್ಕೆ ಸಿಗುವಷ್ಟು ಜನ ಮೆಚ್ಚುಗೆಯನ್ನು ಮಹಿಳೆಯರ ಕ್ರಿಕೆಟ್ ಪಡೆದುಕೊಳ್ಳುತ್ತಿದೆ. ಕ್ರಿಕೆಟ್ ಕ್ರೀಡಾಕೂಟದಲ್ಲಿ ಇರುವ ಯುವತಿಯರಿಗೆ ಮುಂದಿನ ದಿನಗಳಲ್ಲಿ ಸಾಕಷ್ಟು ಅವಕಾಶಗಳು ಇದ್ದು, ತಮ್ಮ ಪ್ರತಿಭೆ ಹೊರಹಾಕಲು ಈ ಕ್ರೀಡಾಕೂಟ ಸೂಕ್ತ ವೇದಿಕೆಯಾಗಿದೆ. ಇಂತಹ ಪಂದ್ಯಾವಳಿಯನ್ನು ನಡೆಸುವುದರಿಂದ ಸ್ಥಳೀಯ ಉತ್ತಮ ಕ್ರೀಡಾಪಟುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ ಎಂದರು.

ಟೈಮ್ಸ್ ಸ್ಪೋರ್ಟ್ಸ್ ಅಕಾಡೆಮಿ ಮುಖ್ಯಸ್ಥ ಹಾಗೂ ರೋಟರಿ ರಾಯಲ್ ಕ್ಲಬ್ ಅಧ್ಯಕ್ಷ ಬಿ.ಕೆ.ಟೈಮ್ಸ್ ಗಂಗಾಧರ್ ಮಾತನಾಡಿ, ಕಳೆದ ವರ್ಷದಿಂದ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸಿಕೊಂಡು ಬರಲಾಗುತ್ತಿದ್ದು, ಮೊದಲ ವರ್ಷವೇ ಯುವತಿಯರ ಕ್ರಿಕೆಟ್ ಪಂದ್ಯಾವಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಎಂದು ಹರ್ಷ ವ್ಯಕ್ತಪಡಿಸಿದರು.

ಕರ್ನಾಟಕ ಕ್ರಿಕೆಟ್ ಅಕಾಡೆಮಿ ಸದಸ್ಯರುಗಳಾದ ಸುರೇಶ್, ರವಿ, ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಅಶೋಕ್ ಕುಮಾರ್, ಕ್ರಿಕೆಟ್ ತರಬೇತುದಾರ ಮುರಳಿ, ವಿನಯ್, ರೋಟರಿ ರಾಯಲ್ ಕ್ಲಬ್ ಖಜಾಂಚಿ ದಿಲೀಪ್‌ಕುಮಾರ್ ಇನ್ನಿತರರಿದ್ದರು.

## ಜಯಂತಿಗಳು ಜಾತಿ ಆಧಾರಿತವಾಗದೆ, ಎಲ್ಲಾ ವರ್ಗದವರು ಸೇರಿ ಆಚರಿಸುವ ಸಾರ್ವತ್ರಿಕ ಕಾರ್ಯಕ್ರಮಗಳಾಗಬೇಕು

# ಮಹನೀಯರ ಜಯಂತಿ ಸಮುದಾಯಕ್ಕೆ ಸೀಮಿತ: ವಿಷಾದ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಹನೀಯರ ಜಯಂತಿಗಳನ್ನು ಕೇವಲ ಅವರದೇ ಸಮುದಾಯದವರು ಮತ್ತು ಕೆಲವೇ ಅಧಿಕಾರಿಗಳು ಸೇರಿಕೊಂಡು ಆಚರಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿ ಎಂದು ಟಿಎಪಿಸಿಎಂಎಸ್ ನಿರ್ದೇಶಕ ಎಂ.ಆರ್. ಅನಿಲ್‌ಕುಮಾರ್ ಅವರು ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಆಯೋಜಿಸಲಾಗಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಸವಿತಾ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿ, ಮಹನೀಯರ ಜಯಂತಿಗಳನ್ನು ಕೇವಲ ಒಂದು ನಿರ್ದಿಷ್ಟ ಸಮುದಾಯ ಅಥವಾ ಜಾತಿಗೆ ಸೀಮಿತಗೊಳಿಸುವುದು ಸೂಕ್ತವಲ್ಲ ಎಂದರು.

ಅವರ ತತ್ವ, ಆದರ್ಶ ಮತ್ತು ಕೊಡುಗೆಗಳು ಸರ್ವ ಜನರಿಗೂ ಅನ್ವಯಿಸುತ್ತವೆ. ಜಯಂತಿಗಳು ಜಾತಿ ಆಧಾರಿತ ಆಚರಣೆಯಾಗದೆ, ಸಮಾಜದ ಎಲ್ಲಾ ವರ್ಗದವರು ಒಟ್ಟಾಗಿ ಸೇರಿ ಆಚರಿಸುವ ಸಾರ್ವತ್ರಿಕ ಕಾರ್ಯಕ್ರಮಗಳಾಗಬೇಕು, ಇದರಿಂದ ಏಕತೆ ಮತ್ತು ಸೌಹಾರ್ದತೆ ಮೂಡುತ್ತದೆ. ಆಗ ಮಾತ್ರ ಅವರ ತತ್ವ ಸಿದ್ಧಾಂತಗಳು ಎಲ್ಲರಿಗೂ ತಿಳಿದು ಜೀವನಕ್ಕೆ ಮಾರ್ಗದರ್ಶನವಾಗಲಿದೆ ಎಂದು ತಿಳಿಸಿದರು.

ಸವಿತಾ ಸಮಾಜ ಹಿಂದಿನಿಂದಲೂ ಸಾಮಾಜಿಕ ಸಮಾನತೆ ಮತ್ತು ನ್ಯಾಯದ ನೆಲೆಯಲ್ಲಿ ಸೇವೆ ಸಲ್ಲಿಸುತ್ತಾ ಬಂದಿದೆ. ಸವಿತಾ ಸಮಾಜವು ಇಂದು ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದೆ. ಈ ಸಮಾಜದವರನ್ನು ಮೇಲೆತ್ತುವ ಕಾರ್ಯ ಆಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸವಿತಾ ಮಹರ್ಷಿ ಜಯಂತಿ ಆಚರಣೆಯು ಈ ಸಮುದಾಯದವರ



ಜನರನ್ನು ಸಂಘಟಿಸಲು, ಸಾಮಾಜಿಕವಾಗಿ, ಆರ್ಥಿಕವಾಗಿ ಬಲಪಡಿಸಲು ಸಹಾಯಕವಾಗಲಿದೆ. ಸಮಾಜವು ಶಿಕ್ಷಣಕ್ಕೆ ಒತ್ತು ನೀಡಬೇಕು. ಶಿಕ್ಷಣದಿಂದ ಸ್ವಾವಲಂಬಿಸಿ ಬದುಕಿನೊಂದಿಗೆ ಆರ್ಥಿಕವಾಗಿ ಸದೃಢವಾಗಲು ಸಾಧ್ಯವಿದೆ ಎಂದು ಹೇಳಿದರು.

ಈ ಜಯಂತಿ ಆಚರಣೆಯು ಕೇವಲ ಸವಿತಾ ಸಮಾಜದವರಿಗೆ ಸೀಮಿತವಾದ ಆಚರಣೆಯಾಗದೇ ಸರ್ವರ ಏಳಿಗೆಯ ಪ್ರತೀಕವಾಗಲಿ. ಸವಿತಾ ಮಹರ್ಷಿಗಳ ಹಾದಿಯಲ್ಲಿ ನಾವೆಲ್ಲ ಸಾಗಿ ಆಚಾರ- ವಿಚಾರ ಮೈಗೂಡಿಸಿಕೊಳ್ಳೋಣ. ಸಮಾಜದಲ್ಲಿ ಸತ್ವಜೆಗಳಾಗಿ, ಸರ್ವರನ್ನು ಗೌರವಿಸುವಂತಾಗೋಣ. ಎಲ್ಲ ವರ್ಗದ ಜನರಿಗೂ ತಾರತಮ್ಯ ವಿಲ್ಲದೇ ಸವಿತಾ ಸಮಾಜ ಸೇವೆ ನೀಡುತ್ತಿರುವುದು ಹೀಗೆಯೇ ಮುಂದುವರೆಯಲಿ. ಸವಿತಾ ಸಮಾಜದವರು ಸಾಮಾಜಿಕ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮತ್ತಷ್ಟು ಸದೃಢವಾಗಲಿ ಎಂದು ಶುಭ ಹಾರೈಸಿದರು.

ತಾಲ್ಲೂಕು ನ್ಯೂ ಸವಿತಾ ಸಮಾಜದ ಅಧ್ಯಕ್ಷ ಕೆ.ಎಂ.ಲೋಹಿತ್ ಅವರು ಮಾತನಾಡಿ, ಶಿವನ ದಿವ್ಯದೃಷ್ಟಿಯಿಂದ ಜನ್ಮತಾಳಿದ ಸವಿತಾ ಮಹರ್ಷಿ ದೇವಾನು ದೇವತೆಯರ ಆಯುಷ್ಕರ್ಮ ಸೇವೆ ಮಾಡುತ್ತಿದ್ದರು. ಅವರೊಬ್ಬ ಯುಗ ಪುರುಷರಾಗಿದ್ದರು, ಅಪಾರ ಜ್ಞಾನಭಂಡಾರ ಹೊಂದಿದರು ಇವರ ಮಗಳಾದ ಗಾಯತ್ರಿದೇವಿಯು ಶ್ರೇಷ್ಠ ಮಂತ್ರವಾದ ಗಾಯತ್ರಿ ಮಂತ್ರವನ್ನು ರಚಿಸಿದ್ದಾರೆ. 12ನೇ ಶತಮಾನದಲ್ಲಿ ಬಸವಣ್ಣನಿಗೆ ಆಶ್ರಯ ನೀಡಿದ್ದು ಸವಿತಾ ಸಮಾಜದ ದೊರೆ ಬಿಜ್ಜಳ ಎಂಬುದು ವಿಶೇಷ. ಸವಿತಾ ಸಮಾಜ ಶುಭ ಕಾರ್ಯಗಳಿಗೆ ಮುಂದಿರುತ್ತದೆ ಎಂದರು.

ಸವಿತಾ ಮಹರ್ಷಿ ಜಯಂತಿ ಆಚರಣೆಯಿಂದ ಸಮುದಾಯದ ಜನರನ್ನು ಸಂಘಟಿಸಲು ಸಹಾಯವಾಗುತ್ತದೆ. ಕಡಿಮೆ ಜನಸಂಖ್ಯೆ ಹೊಂದಿರುವ ಸವಿತಾ ಸಮಾಜದವರು ಸಂಘಟಿತರಾದರೆ ಮಾತ್ರ ಸಮುದಾಯ ಮುಖ್ಯವಾಹಿನಿಗೆ ಬರಲು ಸಾಧ್ಯ. ಸಂಘಟನೆಗೆ ಬಲ ತುಂಬಲು ಸಮುದಾಯದವರು ನಿರ್ಣಾಯಕ ಪಾತ್ರ ವಹಿಸಬೇಕು. ಸಮಾಜ ಸಂಘಟನೆಯಿಂದ ಸರ್ಕಾರದ ಸೌಲಭ್ಯ ಬಳಸಿಕೊಂಡು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಬೆಳೆಯಬೇಕು. ಪಟ್ಟಣದಲ್ಲಿ ಸಮಾಜದ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಭವನ ನಿರ್ಮಾಣ ಮಾಡಲು ನಿವೇಶನವನ್ನು ಒದಗಿಸಿದ್ದು ಮುಂದಿನ ದಿನಗಳಲ್ಲಿ ಭವನ ನಿರ್ಮಾಣ ಮಾಡಲು ಅನುದಾನ ಒದಗಿಸಬೇಕೆಂದು ಅವರು ಮನವಿ ಮಾಡಿದರು.

ಬಿಜೆಪಿ ಮುಖಂಡ ಸಿ.ಆರ್. ಚಿದಾನಂದ್, ಶಿರಸ್ತೆದಾರ್ ಪವನ್ ಕುಮಾರ್, ಉಪನೊಂದಣಾಧಿಕಾರಿ ದೇವರಾಜ್, ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಗುರುಮೂರ್ತಿ, ಕಾರ್ಯಧ್ಯಕ್ಷ ಜಿ. ವೆಂಕಟೇಶ್, ಜಿಲ್ಲಾ ಸಂಘದ ಉಪಾಧ್ಯಕ್ಷ ಬೇಲೂರು ಜಯರಾಮ್, ತಾಲ್ಲೂಕು ನ್ಯೂ ಸವಿತಾ ಸಮಾಜದ ಕಾರ್ಯದರ್ಶಿ ಗಣೇಶ್, ಬಿ.ಎಂ. ಪ್ರಕಾಶ್, ಸಿ.ಆರ್. ಕುಮಾರ್ ಇನ್ನಿತರರಿದ್ದರು.

# ಹೊ.ನ.ಪುರದಲ್ಲಿ ನಾಳೆ ಜನಸ್ಪಂದನಾ ಸಭೆ

• ಪ್ರಜೂದಯಿ ಎಂದ

**ಹೊಳೆನರಸೀಪುರ:** ಜನರ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸುವ ನಿಟ್ಟಿನಲ್ಲಿ ನಡೆಸಲಾಗುತ್ತಿರುವ ಜನಸ್ಪಂದನಾ ಸಭೆಯನ್ನು ಫೆ.7 ರ ಶನಿವಾರ ನಡೆಸಲಾಗುತ್ತಿದೆ ಎಂದು ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಅವರು ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆಗೆ ಕೋರಿರುವ ಅವರು, ಜಿಲ್ಲಾಧಿಕಾರಿಗಳ ಆದೇಶದಂತೆ ತಾಲ್ಲೂಕು ಮಟ್ಟದ ಜನಸ್ಪಂದನಾ ಸಭೆಯನ್ನು ಪ್ರತಿ ತಿಂಗಳ ಮೊದಲನೇ ಶನಿವಾರ ನಡೆಸಲಾಗುವುದು. ಬೆಳಗ್ಗೆ 10 ಗಂಟೆಯಿಂದ ಮದ್ಯಾಹ್ನ 1.30 ರವರೆಗೂ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆಯಲಿದೆ. ಎಲ್ಲ ಇಲಾಖಾ ಅಧಿಕಾರಿಗಳು ಸಭೆಯಲ್ಲಿ ಹಾಜರಿರುತ್ತಾರೆ. ಜನರು ನೀಡುವ ಅಹವಾಲುಗಳನ್ನು ಸ್ವೀಕರಿಸಲಾಗುವುದು ಎಂದು ತಿಳಿಸಿದ್ದಾರೆ.

# ಮಕ್ಕಳ ಚಂದಿರ ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಾಸನ:** ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ 2024 ಹಾಗೂ 2025 ನೇ ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸ್ವರಚಿತ ಕವನ ಸಂಕಲನ, ಕಥಾ ಸಂಕಲನ ನಾಟಕ, ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ, ಮಕ್ಕಳ ಸಾಹಿತ್ಯ ವಿಮರ್ಶಾ ಕೃತಿ ಹೀಗೆ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿದ್ದು, ಕೃತಿಯ 4 ಪ್ರತಿಗಳನ್ನು ಫೆ.10 ರೊಳಗೆ ಉಪನಿರ್ದೇಶಕರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಕೆ.ಆರ್. ಪುರಂ ಇವರಿಗೆ ಸಲ್ಲಿಸ ಬಹುದಾಗಿದೆ

ಮಾಹಿತಿಗೆ ದೂರವಾಣಿ ಸಂಖ್ಯೆ: 08172-267218ನ್ನು ಅಥವಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಕೆ.ಆರ್. ಪುರಂ, ಹಾಸನ ಕಚೇರಿಯನ್ನು ಸಂಪರ್ಕಿಸಿ ಪಡೆಯಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ಪಾಲಿಕೆ ಚುನಾವಣೆ ಸನಿಹ: ವಾರ್ಡ್ ಮರು ವಿಂಗಡಣೆ

» ಮೊದಲನೇ ಪುಟದಿಂದ

**8ನೇ ವಾರ್ಡ್**

ಡೇರಿ ಸರ್ಕಲ್‌ನಿಂದ ಪ್ರಾರಂಭಗೊಂಡು ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಕಾಂಪೌಂಡ್‌ನ ಮೂಲಕ ಆಡುವಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹತ್ತಿರ ತಲುಪುತ್ತದೆ. ನಂತರ ಮಿನಿ ವಿಧಾನಸೌಧದ 60 ಅಡಿ ರಸ್ತೆಗೆ ತಲುಪುವುದು ನಂತರ ಹೊರವರ್ತುಲ ರಿಂಗ್ ರಸ್ತೆಗೆ ತಲುಪುವುದು. (ಬಲಭಾಗ ಒಳಗೊಂಡು).

**9ನೇ ವಾರ್ಡ್‌ನೇ ಬಗ್ಗೆ ಪ್ರಕಟಣೆಯಲ್ಲಿ ಸರಿಯಾದ ಮಾಹಿತಿ ಲಭ್ಯವಾಗಿಲ್ಲ.**

**10ನೇ ವಾರ್ಡ್**

ಹೊರ ವರ್ತಲರಿಂಗ್ ರಸ್ತೆ ಸತ್ಯಮಂಗಲ ಕ್ರಾಸ್‌ನಿಂದ ಪ್ರಾರಂಭಿಸಿ ಚಾಮುಂಡೇಶ್ವರಿ ದೇವಸ್ಥಾನದ ಸರ್ಕಲ್‌ವರೆಗೆ ತಲುಪುತ್ತದೆ. ನಂತರ ಯಡಿಯೂರು ಗ್ರಾಮದ ಎಲ್ಲಾ ಸರ್ವೆ ನಂಬರ್‌ಗಳನ್ನು ಒಳಗೊಂಡು ಚಿಕ್ಕಹೊನ್ನೇನಹಳ್ಳಿ ವೃತ್ತದಿಂದ ಪೂರ್ವಾಭಿಮುಖವಾಗಿ ಯಡಿಯೂರು ಗ್ರಾಮದ ಸರ್ವೆ ನಂ.28ಕ್ಕೆ ಕೊನೆಗೊಳ್ಳುತ್ತದೆ. ಅಲ್ಲಿಂದ ದೊಡ್ಡಹೊನ್ನೇನಹಳ್ಳಿ ಗ್ರಾಮದ ಎಲ್ಲಾ ಸರ್ವೆ ನಂಬರ್‌ಗಳನ್ನು ಒಳಗೊಂಡು ರಿಂಗ್ ರಸ್ತೆಗೆ ತಲುಪುತ್ತದೆ.

**11ನೇ ವಾರ್ಡ್**

ಹಾಸನ-ಬೇಲೂರು ಡೇರಿ ವೃತ್ತದ ರಿಂಗ್ ರಸ್ತೆಯ ನಾಯರ್ ಪೆಟ್ರೋಲ್ ಬಂಕ್‌ನಿಂದ ಪ್ರಾರಂಭವಾಗೊಂಡು ದಕ್ಷಿಣಾಭಿಮುಖವಾಗಿ ಮಿನಿ ವಿಧಾನಸೌಧದ ಮುಖ್ಯರಸ್ತೆಯಲ್ಲಿ ಮಾಸ್ಟರ್ ಕಾಲೇಜ್ ಮುಂಭಾಗ ಸಾಗಿ ಗ್ರೀನ್ ಪಾರ್ಕ್ ಪಾರ್ಟಿಹಾಲ್ ಸರ್ಕಲ್‌ವರೆಗೆ ಸಾಗಿ ನಂತರ ಬಲಕ್ಕೆ ಪಶ್ಚಿಮ ದಿಕ್ಕಿನಲ್ಲಿ ರಾಜಕಾಲುವೆ ಛೇದಿಸಿಕೊಂಡು ಗೌರಿಕೊಪ್ಪಲು ಮುಖ್ಯರಸ್ತೆ ತಲುಪುತ್ತದೆ. ನಂತರ ಬಲಕ್ಕೆ ಗೌರಿಕೊಪ್ಪಲಿನ ಅರಳಿಮರದ ವೃತ್ತ, ವಿದ್ಯಾನಗರ ಮುಖ್ಯರಸ್ತೆ ಮೂಲಕ ರಿಂಗ್ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ರಸ್ತೆಗೆ ತಲುಪುವುದು.

**12 ನೇ ವಾರ್ಡ್**

ಕುವೆಂಪುನಗರ ಪಂಚಮುಖಿ ಗಣಪತಿ ದೇವಸ್ಥಾನ ಮುಂಭಾಗದಿಂದ ಪ್ರಾರಂಭಿಸಿ ಉತ್ತರಾಭಿಮುಖವಾಗಿ ಹೊಯ್ಸಳ ನಗರ ರಸ್ತೆ ಮೂಲಕ ಸಾಗಿ ಗೌರಿ ಕೊಪ್ಪಲಿನ ಎಸ್.ಬಿ.ಐ ಶಾಖೆಯವರೆಗೆ. ಅಲ್ಲಿಂದ ವಿಧಾನಸೌಧ ರಸ್ತೆಯವರೆಗೆ ಗ್ರೀನ್ ಪಾರ್ಕ್ ಪಾರ್ಟಿಹಾಲ್ ಸರ್ಕಲ್ ವರೆಗೆ ಸಾಗಿ ನಂತರ ಅರವಿಂದ ಶಾಲೆ ಮುಂಭಾಗ ಹಾದು ನಂತರ ಬಲಕ್ಕೆ ಪಶ್ಚಿಮಾಭಿಮುಖವಾಗಿ ಕುಂವೆಂಪು ನಗರ 2ನೇ ಮುಖ್ಯ ರಸ್ತೆಯಲ್ಲಿ ರಾಜಕಾಲುವೆಯನ್ನು ಛೇದಿಸಿಕೊಂಡು ಪಂಚ ಮುಖಿ ಗಣಪತಿ ಸರ್ಕಲ್‌ಗೆ ತಲುಪುವುದು.

**13ನೇ ವಾರ್ಡ್**

ಗೌರಿಕೊಪ್ಪಲಿನ ಮುಖ್ಯರಸ್ತೆಯ ವಿನಾಯಕ ಸಮುದಾಯ ಭವನದಿಂದ ಪ್ರಾರಂಭಿಸಿ ಹೊಯ್ಸಳ ನಗರದ ಮುಖ್ಯರಸ್ತೆ, ಎಸ್.ಜೆ.ಪಿ ರಸ್ತೆಯನ್ನು ಛೇದಿಸಿಕೊಂಡು ಮೈಲಾರ ಲಿಂಗೇಶ್ವರ ದೇವಸ್ಥಾನ ರಸ್ತೆಯ ಮೂಲಕ ಕೆ.ಆರ್.ಪುರಂ ಮಸೀದಿ ಸರ್ಕಲ್‌ಗೆ ತಲುಪುವುದು. ನಂತರ ಬಲಕ್ಕೆ ತಿರುಗಿ ಉತ್ತರಾ ಭಿಮುಖವಾಗಿ ಸಂಪಿಗೆ ರಸ್ತೆಯಲ್ಲಿಯೇ ದೊಡ್ಡಿ ರಸ್ತೆ ತಲುಪಿ, ಎಂ.ಜಿ. ರಸ್ತೆಯಲ್ಲಿ ಉತ್ತರಾಭಿಮುಖವಾಗಿ ಸಾಗಿ ಡಿ.ಟಿ.ಐ ಸರ್ಕಲ್‌ಗೆ ತಲುಪಿ ನಂತರದಲ್ಲಿ ಬಲಕ್ಕೆ ತಿರುಗಿ ಪೂರ್ವಾಭಿ ಮುಖವಾಗಿ ಬುದ್ಧ ಮಾರ್ಗದಲ್ಲಿ ಸಾಗಿ ಅರಳೀಮರ ಸರ್ಕಲ್ ಮೂಲಕ ಗೌರಿಕೊಪ್ಪಲು ಮುಖ್ಯರಸ್ತೆಯನ್ನು ಸಂಪರ್ಕಿಸುವ ವಿನಾಯಕ ಸಮುದಾಯ ಭವನದ ಹತ್ತಿರ ಸೇರುತ್ತದೆ.

**14ನೇ ವಾರ್ಡ್**

ರಿಂಗ್ ರಸ್ತೆಯ ಕ್ರೈಸ್ಟ್ ಶಾಲೆಯ ಪಕ್ಕದಲ್ಲಿ ಪ್ರಾರಂಭಿಸಿ ದಕ್ಷಿಣಾಭಿಮುಖವಾಗಿ ವಿದ್ಯಾನಗರದ ಮುಖ್ಯರಸ್ತೆಯಲ್ಲಿ ಸಾಗಿ ವಿದ್ಯಾನಗರದ ಗೌರಿಕೊಪ್ಪಲು ಅರಳೀಕಟ್ಟೆ ಸರ್ಕಲ್‌ಗೆ ತಲುಪಿ. ನಂತರ ಪಶ್ಚಿಮಾಭಿಮುಖವಾಗಿ ಬಿದ್ದ ಮರ್ಗವಾಗಿ ಎಂ.ಜಿ. ರಸ್ತೆಯ ಡಿ.ಟಿ.ಐ ಹತ್ತಿರ ಸೇರುತ್ತದೆ. ನಂತರ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ ಎಂ.ಜಿ.ರಸ್ತೆಯಲ್ಲಿ ಸಾಗಿ ರಿಂಗ್ ರಸ್ತೆಯ ತನ್ವಿ-ತ್ರಿಶಾ ಕಲ್ಯಾಣ ಮಂಟಪದ ತಲುಪುವುದು.

**15ನೇ ವಾರ್ಡ್**

ಹೊರವರ್ತುಲ ರಸ್ತೆಯ ತನ್ವಿ-ತ್ರಿಶಾ ಕಲ್ಯಾಣ ಮಂಟಪ ವೃತ್ತದಿಂದ ಸಾಲಗಾಮೆ ರಸ್ತೆಯನ್ನು ಸಂಪರ್ಕಿಸಿ ನಂತರ ಅಂತರಿಕ್ಷ ನಗರದ ಕ್ರಾಸ್‌ವರೆಗೆ ಸಾಗಿ ಹೊನ್ನೇನಹಳ್ಳಿ (ಸ್ಪೇಸ್ ಕ್ವಾಟ್ರಸ್ ಬಲಭಾಗ ಒಳಗೊಂಡು) ಕ್ರಾಸ್‌ಗೆ ತಲುಪುತ್ತದೆ. ನಂತರ ರಿಂಗ್ ರಸ್ತೆಯ ಚಾಮುಂಡೇಶ್ವರಿ ದೇವಸ್ಥಾನದ ಸರ್ಕಲ್‌ಗೆ ತಲುಪಿ ನಂತರ ಬಾಲಭಾಗ ಒಳಗೊಂಡು ಪಶ್ಚಿಮಭಿ ಮುಖವಾಗಿ ಸಾಗಿ ತನ್ವಿ-ತ್ರಿಶಾ ಕಲ್ಯಾಣಮಂಟಪ ಸರ್ಕಲ್‌ಗೆ ತಲುಪುತ್ತದೆ.

**16ನೇ ವಾರ್ಡ್**

ಚಿಕ್ಕಹೊನ್ನೇನಹಳ್ಳಿ ವೃತ್ತದಿಂದ ಪ್ರಾರಂಭಗೊಂಡು ದಕ್ಷಿಣಾ ಭಿಮುಖವಾಗಿ ಸ್ಪೇಸ್ ಕ್ವಾಟ್ರಸ್ ಕಾಂಪೌಂಡ್ ಪಕ್ಕದ ರಸ್ತೆಯಲ್ಲಿ ಸಾಗಿ ನಂತರ ಸ್ಪೇಸ್ ವಸತಿ ಗೃಹದ ಮುಂಭಾಗದಲ್ಲಿ ಹಾದು ಹಾಸನ-ಹಳೆಬೀಡು ರಸ್ತೆ ಸಂಪರ್ಕಿಸಿ ರಿಂಗ್ ರಸ್ತೆ ತಲುಪು ವುದು. ನಂತರ ದಕ್ಷಿಣಾಭಿಮುಖವಾಗಿ 80 ಅಡಿ ರಸ್ತೆಯಲ್ಲಿ ಬಲಭಾಗ ಒಳಗೊಂಡು ಈದ್ಗಾ ಮೈದಾನ ತಲುಪುತ್ತದೆ. ಹುಣಸಿನಕೆರೆ ಒಳಗೊಂಡಂತೆ ಚಿಕ್ಕಕೊಂಡಗೊಳ ಹಾಗು ಹರಳ ಹಳ್ಳಿ ಗ್ರಾಮದ ಎಲ್ಲಾ ಸರ್ವೆನಂಬರ್‌ಗಳನ್ನು ಒಳಗೊಂಡು ಚಿಕ್ಕಹೊನ್ನೇನಹಳ್ಳಿ ವೃತ್ತ ತಲುಪುತ್ತದೆ.

**17ನೇ ವಾರ್ಡ್**

ತನ್ವಿ-ತ್ರಿಶಾ ಕಲ್ಯಾಣ ಮಂಟಪದಿಂದ ಪ್ರಾರಭಿಸಿ ಎಂ.ಜಿ. ರಸ್ತೆಯಲ್ಲಿ ಸಾಗಿ ಜಿಲ್ಲಾ ತರಬೇತಿ ಸಂಸ್ಥೆ ತಲುಪಿ ನಂತರ ಬಲಕ್ಕೆ ಮಹಿಳಾ ಕಾಲೇಜು ರಸ್ತೆಯಲ್ಲಿ ಸಾಗಿ ಆರ್.ಸಿ. ರಸ್ತೆಯನ್ನು ತಲುಪುತ್ತದೆ. ನಂತರ ಹೆಚ್.ಎಸ್.ಪ್ರಕಾಶ್ ರಸ್ತೆ ಮೂಲಕ (ಬಲಭಾಗ ಒಳಗೊಂಡು) ಸಾಲಗಾಮೆ ರಸ್ತೆ ತಲುಪುತ್ತದೆ. ನಂತರ ಎಡಕ್ಕೆ ಸಂಗಮೇಶ್ವರ ಬಡಾವಣೆಯ ಸಾರ್ವಜನಿಕ ಗ್ರಂಥಾಲಯ ಮುಂಭಾಗದ ರಸ್ತೆಗೆ ತಲುಪಿ ನಂತರ ಉತ್ತರಾ ಭಿಮುಖವಾಗಿ ವೀರಶೈವ ರುದ್ರಭೂಮಿ ಮುಂಭಾಗದ ರಸ್ತೆ ಮೂಲಕ ಹೇಮಾವತಿ ನಗರದ ಮುಖ್ಯ ರಸ್ತೆ ಮೂಲಕ ತಮ್ಲಾಪುರ ಹೈಮಾಸ್ ರಿಂಗ್ ರಸ್ತೆಗೆ ತಲುಪುತ್ತದೆ.

**18ನೇ ವಾರ್ಡ್**

ಎಂ.ಜಿ.ರಸ್ತೆಯ ಜಿಲ್ಲಾ ತರಬೇತಿ ಸಂಸ್ಥೆಯ ದಕ್ಷಿಣಾಭಿ ಮುಖವಾಗಿ ದೊಡ್ಡಿ ರಸ್ತೆಯಲ್ಲಿಯೇ ಸಾಗಿ ಸ್ಟೇಟಸ್ ಹಾಲ್ ಸರ್ಕಲ್‌ಗೆ ತಲುಪುವುದು. ನಂತರ ಬಲಕ್ಕೆ ತಿರುಬಿ ಉತ್ತರಾಭಿ ಮುಖವಾಗಿ ಆರ್.ಸಿ.ರಸ್ತೆಯಲ್ಲಿ ಸಾಗಿ ಎನ್.ಸಿ.ಸಿ ಕಚೇರಿ, ಮಹಿಳಾ ಕಾಲೇಜು ರಸ್ತೆ ಮೂಲಕ ಎಂ.ಜಿ ರಸ್ತೆಯ ಡಿ.ಟಿ.ಐ ಸರ್ಕಲ್‌ಗೆ ತಲುಪುವುದು.

**19ನೇ ವಾರ್ಡ್**

ಸರ್ಕಾರಿ ವಿಜ್ಞಾನ ಮತ್ತು ಕಲಾ ಕಾಲೇಜಿನಿಂದ ಪ್ರಾರಂಭಿಸಿ ದಕ್ಷಿಣಾಭಿಮುಖವಾಗಿ ಆರ್.ಸಿ.ರಸ್ತೆಯಲ್ಲಿ ಸಾಗಿ ಸ್ಟೇಟಸ್ ಹಾಲ್ ಸರ್ಕಲ್‌ಗೆ ತಲುಪುವುದು. ನಂತರ ಎ.ವಿ.ಕೆ. ಕಾಲೇಜು ರಸ್ತೆ ಮೂಲಕ ಮಹಾವೀರ ವೃತ್ತ ತಲುಪುವುದು. ನಂತರ ಸಹ್ಯಾದ್ರಿ ವೃತ್ತದ ಮೂಲಕ ಹಾದು ಅರಳೀಕಟ್ಟೆ ವೃತ್ತ ಮೂಲಕ ಸಾಲಗಾಮೆ ರಸ್ತೆಯಲ್ಲಿ ಸಂಜೀವಿನಿ ಆಸ್ಪತ್ರೆ ಮುಂಭಾಗದ ಸರ್ಕಲ್‌ಗೆ ತಲುಪುವುದು.

**20ನೇ ವಾರ್ಡ್**

ಸಾಲಗಾಮೆ ರಸ್ತೆ ಸರಸ್ವತಿ ದೇವಸ್ಥಾನದ ಸರ್ಕಲ್‌ನಿಂದ ದಕ್ಷಿಣಾಭಿಮುಖವಾಗಿ ಸಾಗಿ ಸಾಲಗಾಮೆ ರಸ್ತೆಯಿಂದ ಸಹ್ಯಾದ್ರಿ ಸರ್ಕಲ್ ಮುಖಾಂತರ ಮಹಾವೀರ ಸರ್ಕಲ್ ತಲು ಪುವುದು. ನಂತರ ಹೊಸಲೈನ್ ರಸ್ತೆಯಲ್ಲಿಯೇ ಬಸವೇಶ್ವರ ಕಲ್ಯಾಣ ಮಂಟಪ ಮುಂಭಾಗ ಈದ್ಗಾ ಸರ್ಕಲ್ ಹಾಗು ಲಕ್ಷ್ಮೀಪುರ ಸರ್ಕಲ್ ನಿಂದ ಈಶಾನ್ಯ ದಿಕ್ಕಿನಲ್ಲಿ ಸೆಂಟ್ ಜೋಸೇಫ್ ಮುಂಭಾಗ ಹಾಗು ಸಾಲಗಾಮೆ ರಸ್ತೆಯ ಸರಸ್ವತಿ ವೃತ್ತ ತಲುಪುವುದು.

**21ನೇ ವಾರ್ಡ್**

ಮಹಾವೀರ ವೃತ್ತದಿಂದ ಪ್ರಾರಂಭಿಸಿ ಕಸ್ತೂರ ಬಾ ರಸ್ತೆಯಲ್ಲಿ ಸಾಗಿ ದೇವಿಗೆರೆ ವೃತ್ತದಿಂದ ದಕ್ಷಿಣಾಭಿಮುಖವಾಗಿ ಸಾಗಿ ಗಾಂಧಿ ಬಜಾರ್ ಮುಖ್ಯರಸ್ತೆಯ ನಿಲುವಾಗಿಲು ಅಂಜ ನೇಯಸ್ವಾಮಿ ದೇವಸ್ಥಾನದ ಹತ್ತಿರ ತಲುಪಿ, ಗಾಂಧಿ ಬಜಾರ್ ಮುಖ್ಯರಸ್ತೆಯಲ್ಲಿಯೇ ಸಾಗಿ ಹೊಸಲೈನ್ ರಸ್ತೆಗೆ ತಲು ಪುವುದು. ನಂತರ ಡಬಲ್ ಟ್ಯಾಂಕ್ ವೃತ್ತದ ಮೂಲಕ ಹಾದು ಹೊಸಲೈನ್ ರಸ್ತೆಯಲ್ಲಿ ಡಿ.ಎ.ಆರ್. ಕ್ವಾಟ್ರಸ್‌ಗೆ ಹೋಗುವ ರಸ್ತೆಗೆ ತಲುಪುವುದು, ನಂತರ ವಾಣಿವಿಲಾಸ ಶಾಲೆ ರಸ್ತೆಯಲ್ಲಿ ಸಾಗಿ ಮಹಾವೀರ ವೃತ್ತ ಸೇರುವುದು.

**22ನೇ ವಾರ್ಡ್**

ಗಾಂಧಿ ಬಜಾರ್ ವೃತ್ತದಿಂದ ಪ್ರಾರಭಿಸಿ ಮಹಾನಗರ ಪಾಲಿಕೆ ತಲುಪುವುದು. ನಂತರ ವಲ್ಲಬಾಯಿ ರಸ್ತೆಯಲ್ಲಿ ಚಲಿಸಿ ಮಿರ್ಜಾ ಮೊಹಲ್ಲಾ ವೃತ್ತಕ್ಕೆ ಸೇರುತ್ತದೆ. ನಂತರ ಹೊಸಲೈನ್ ಮುಖ್ಯ ರಸ್ತೆಗೆ ಹಾಸನಾಂಬ ದೇವಸ್ಥಾನದ ಹಿಂಭಾಗಕ್ಕೆ ತಲುಪಿ ನಂತರ ಎಡಕ್ಕೆ ತಿರುಗಿ ಬಲಭಾಗ ಒಳಗೊಂಡು ಗಾಂಧಿ ಬಜಾರ್ ಮುಖ್ಯ ರಸ್ತೆಯು ಸೇರುವ ರಸ್ತೆಗೆ ತಲುಪುವುದು.

**23ನೇ ವಾರ್ಡ್**

ಎನ್.ಆರ್.ವೃತ್ತದಿಂದ ಪ್ರಾರಂಭಿಸಿ ದಕ್ಷಿಣಾಭಿಮುಖವಾಗಿ ಹೆಚ್.ಎನ್.ಪುರ ರಸ್ತೆಯಲ್ಲಿ ಸಾಗಿ ರೈಲ್ವೆ ಗೇಟ್ ತಲುಪುವುದು. ನಂತರ ಗೊರೂರು ರಸ್ತೆ, ಪಾಲಿಕೆ ವೃತ್ತಕ್ಕೆ ತಲುಪಿ ನಂತರ ಬಲಕ್ಕೆ ತಿರುಗಿ ಪೂರ್ವಾಭಿಮುಖವಾಗಿ ಬಿ.ಎಂ. ರಸ್ತೆಯಲ್ಲಿ ಸಾಗಿ ಗಾಂಧಿ ಬಜಾರ್ ಸರ್ಕಲ್ ಮೂಲಕ ಎನ್.ಆರ್. ಸರ್ಕಲ್ ತಲುಪುವುದು.

**24ನೇ ವಾರ್ಡ್**

ವಲ್ಲಬಾಯಿ ರಸ್ತೆಯ ಮಿರ್ಜಾ ಮೊಹಲ್ಲಾ ಸರ್ಕಲ್ ನಿಂದ ಪ್ರಾರಂಭಿಸಿ ಎಪಿಎಂಸಿ ಎದುರು 80 ಅಡಿ ರಸ್ತೆಯವರೆಗೆ ತಲು ಪುವುದು. ನಂತರ ಹುಣಸಿನಕೆರೆ ಕೊಡಿಯವರೆಗೆ ಸಾಗುವುದು. ಬಲಭಾಗ ಒಳಗೊಂಡು ಹುಣಸಿನಕೆರೆ ರಸ್ತೆಯಲ್ಲಿ ಕಾಶಿ ವಿಶ್ವನಾಥ ದೇವಸ್ಥಾನದ ಮುಂಭಾಗ ಹಾಗೂ ವಲ್ಲಬಾಯಿ ರಸ್ತೆಯ ಮಿರ್ಜಾ ಮೊಹಲ್ಲಾ ಸರ್ಕಲ್‌ಗೆ ತಲುಪುವುದು.

**25ನೇ ವಾರ್ಡ್**

ಹೊಸಲೈನ್ ರಸ್ತೆಯ ಡಬಲ್ ಟ್ಯಾಂಕ್ ವೃತ್ತದಿಂದ ಪ್ರಾರಂ ಭಿಸಿ ಹಾಸನಾಂಬ ದೇವಸ್ಥಾನದ ಹಿಂಭಾಗದ ವೃತ್ತಕ್ಕೆ ತಲುಪಿ ನಂತರ ಬಲಕ್ಕೆ ತಿರುಗಿ ಮಿರ್ಜಾ ಮೊಹಲ್ಲಾ ವೃತ್ತದ ಮೂಲಕ ಹುಣಸಿನಕೆರೆ ಮುಖ್ಯರಸ್ತೆಯಲ್ಲಿ ಕಾಶಿ ವಿಶ್ವನಾಥ ದೇವಸ್ಥಾನದ ಮುಂಭಾಗ ಹಾದು ಹುಣಸಿನಕೆರೆ ಕೊಡಿ 80 ಅಡಿ ರಸ್ತೆಗೆ ಸೇರು ತ್ತದೆ. ನಂತರ ಎ.ಪಿ.ಜೆ. ಅಬ್ದುಲ್ ಕಲಾಂ ಪಾರ್ಕ್ ಮೂಲೆಯ ಕ್ರಾಸ್‌ಗೆ ತಲುಪಿ ಖಬರಿಸ್ತಾನ್ ಮುಖ್ಯರಸ್ತೆಯಲ್ಲಿ ಗಂಗಾ ಪರಮೇಶ್ವರಿ ದೇವಸ್ಥಾನ ವೃತ್ತದ ಮೂಲಕ್ ಶಾದಿ ಮಹಲ್ ವಲ್ಲಬಾಯಿ ರಸ್ತೆ ತಲುಪುವುದು.

**26ನೇ ವಾರ್ಡ್**

ಬಸವೇಶ್ವರ ಕಲ್ಯಾಣ ಮಂಟಪದ ಮುಂಭಾಗದಿಂದ ಪ್ರಾರಂಭಿಸಿ ವಲ್ಲಬಾಯಿ ರಸ್ತೆಯಲ್ಲಿ ಸಾಗಿ ಹಳೆ ಮಟನ್ ಮಾರ್ಕೆಟ್ ಸರ್ಕಲ್, ಶಾದಿ ಮೊಹಲ್ಲಾ ಸರ್ಕಲ್, ಟಿಪ್ಪುನಗರ ಸರ್ಕಲ್, ಚಿಪ್ಪಿನಕಟ್ಟೆ ಸರ್ಕಲ್ ಮೂಲಕ ಸಾಗಿ ಚಿಕ್ಕನಾಳು ಪೌರಕಾರ್ಮಿಕರ ಕಾಲೋನಿ ರಸ್ತೆ ತಲುಪುವುದು. ಪೂರ್ವಾಭಿ ಮುಖವಾಗಿ ಕುಂಬಾರ ಬೀದಿ ಬ್ಯಾಂಕ್ ರಸ್ತೆಯಲ್ಲಿಯೇ ಸಾಗಿ ಅಡ್ಲಿಮನೆ ರಸ್ತೆಯಲ್ಲಿರುವ ಎಸ್.ವಿ.ಎಂ. ಶಾಲೆ ಹತ್ತಿರ ತಲುಪಿ ನಂತರ ಪೆನ್‌ಷನ್ ಮೊಹಲ್ಲಾ ಮುಖ್ಯರಸ್ತೆ ತಲುಪುವುದು.

**27ನೇ ವಾರ್ಡ್**

ಸಾಲಗಾಮೆ ರಸ್ತೆಯ ಸರಸ್ವತಿ ದೇವಸ್ಥಾನದ ಸರ್ಕಲ್ ನಿಂದ ಪ್ರಾರಂಭಿಸಿ ಈದ್ಗಾ ಸರ್ಕಲ್ ಮೂಲಕ ಬಸವೇಶ್ವರ ಕಲ್ಯಾಣ ಮಂಟಪದ ಮುಂಭಾಗ ಪೆನ್‌ಷನ್ ಮೊಹಲ್ಲಾ ಸರ್ಕಲ್‌ಗೆ ತಲುಪಿ. ನಂತರ ಅಡ್ಲಿಮನೆ ರಸ್ತೆಯವರೆಗೆ ತಲುಪುವುದು. ಕುಂಬಾರ ಬೀದಿ ಟ್ಯಾಂಕ್ ರಸ್ತೆಯಲ್ಲಿ ಸಾಗಿ ಪೊಲೀಸ್ ಕ್ವಾಟ್ರಸ್ ರಸ್ತೆಗೆ ತಲುಪುವುದು. ನಂತರ ಎಡಕ್ಕೆ ತಿರುಗಿ ಚಿಕ್ಕನಾಳು ಸರ್ಕಾರಿ ಉರ್ದು ಶಾಲೆ ಮುಂಭಾಗ ಹಾಗು ಸಮುದಾಯ ಭವನ ಮುಂಭಾಗದ ರಸ್ತೆಯಲ್ಲಿ ಸಾಗಿ ಇಲಾಯಿ ನಗರ ರಸ್ತೆಗೆ ತಲುಪುವುದು. ಅಡ್ಲಿಮನೆ ರಾಜಕುಮಾರ, ಶಾಂತಿನಗರ ವೃತ್ತ, ವೀರಶೈವ ರುದ್ರಭೂಮಿಗೆ ಹೋಗುವ ರಸ್ತೆಯಲ್ಲಿ ಸಾಗಿ ಸರಸ್ವತಿ ದೇವಸ್ಥಾನದ ವೃತ್ತ ತಲುಪುವುದು.

**28ನೇ ವಾರ್ಡ್**

ಸಾಲಗಾಮೆ ರಸ್ತೆಯ ಪ್ರೆಸಿಡೆನ್ಸಿ ಕಾಲೇಜಿನಿಂದ ಪ್ರಾರಂಭಿಸಿ ಜಿಲ್ಲಾ ಕ್ರೀಡಾಂಗಣದ ಗೇಟಿನ ಮುಂಭಾಗ ತಲುಪಿ ನಂತರ ಬಲಕ್ಕೆ ಪಶ್ಚಿಮಭಿಮುಖವಾಗಿ ಹೇಮಾವತಿ ನಗರ ಮುಖ್ಯರಸ್ತೆ ಮೂಲಕ ಸಾಗಿ ಶಾಂತಿನಗರ ವೃತ್ತ (ಅಡ್ಲಿಮನೆ ರಸ್ತೆ) ತಲುಪಿ ನಂತರ ಬಲಕ್ಕೆ ಉತ್ತರಾಭಿಮುಖವಾಗಿ ತೇಜೂರು ಮುಖ್ಯ ರಸ್ತೆಯಲ್ಲಿ ಸಾಗಿ ತಮ್ಲಾಪುರ ರಿಂಗ್ ರಸ್ತೆಯ ಹೈಮಾಸ್ ಸರ್ಕಲ್‌ಗೆ ತಲುಪುವುದು.

**29ನೇ ವಾರ್ಡ್**

ಹೊರವರ್ತುಲ ರಸ್ತೆಯ ತಮ್ಲಾಪುರ ಹೈಮಾಸ್ ಸರ್ಕಲ್ ನಿಂದ ಪ್ರಾರಂಭಗೊಂಡು ಶಾಂತಿನಗರ ವೃತ್ತದ ಮುಖಾಂತರವಾಗಿ ಅಡ್ಲಿಮನೆ ರಸ್ತೆಯ ಶಿವಜ್ಯೋತಿ ಕಲ್ಯಾಣ ಮಂಟಪ ಒಳಗೊಂಡಂತೆ ರಾಜಕುಮಾರ ನಗರ ಮುಖ್ಯ ರಸ್ತೆಯಲ್ಲಿ ಚಲಿಸಿ 80 ಅಡಿ ರಸ್ತೆಗೆ ತಲುಪಿ. ನಂತರ ಬಲಕ್ಕೆ ತಿರುಗಿ ಉತ್ತರಾ ಭಿಮುಖವಾಗಿ 80 ಅಡಿ ರಸ್ತೆಯಲ್ಲಿ ಸಾಗಿ ರಿಂಗ್ ರಸ್ತೆಗೆ ತಲುಪುತ್ತದೆ.

**30ನೇ ವಾರ್ಡ್**

80 ಅಡಿಯ ರಸ್ತೆಯ ರಾಜಕುಮಾರ ನಗರದಿಂದ ಅಡ್ಲಿಮನೆಗೆ ಹೋಗುವ ಸರ್ಕಲ್‌ನಿಂದ ಪ್ರಾರಂಭಿಸಿ ಪೆನ್‌ಷನ್ ಮೊಹಲ್ಲಾ ಟ್ಯಾಂಕ್ ರಸ್ತೆ, ಚಿಪ್ಪಿನಕಟ್ಟೆ ಸರ್ಕಾರಿ ಕಾಲೇಜು ಹಿಂಭಾಗದ ರಸ್ತೆ, ಗಂಗಾ ಪರಮೇಶ್ವರಿ ದೇವಸ್ಥಾನದ ಸರ್ಕಲ್, ನಂತರ ಬಲಕ್ಕೆ ತಿರುಗಿ ಉತ್ತರಾಭಿಮುಖವಾಗಿ 80 ಅಡಿ ರಸ್ತೆ ಯಲ್ಲಿಯೇ ಸಾಗಿ ರಾಜಕುಮಾರ ನಗರದಿಂದ ಅಡ್ಲಿಮನೆಗೆ ಹೋಗುವ ರಸ್ತೆಗೆ ತಲುಪುವುದು.

**31ನೇ ವಾರ್ಡ್**

80 ಅಡಿ ರಸ್ತೆಯಲ್ಲಿಯೇ ದಕ್ಷಿಣಾಭಿಮುಖವಾಗಿ ಬಿ.ಎ.ಎಂ. ರಸ್ತೆಯ ಎ.ಪಿ.ಎಂ.ಸಿ. ಹತ್ತಿರ ತಲುಪುತ್ತದೆ. ನಂತರ ಎಸ್.ಡಿ.ಎಂ. ಕಾಲೇಜು ಒಳಗೊಂಡು ತಣ್ಣೀರುಹಳ್ಳ ಸರ್ಕಲ್ ತಲುಪಿ, ನಂತರ ಉತ್ತರಾಭಿಮುಖವಾಗಿ ಬೇಲೂರು ರಸ್ತೆಯಲ್ಲಿ ಚಲಿಸಿ ಜೆಡ್ ಕ್ವಾರ್ಟಸ್ ಹತ್ತಿರ ತಲುಪುತ್ತದೆ. ಗುಡ್ಡೇನಹಳ್ಳಿ ಗ್ರಾಮದ ಎಲ್ಲಾ ಸರ್ವೆ ನಂಬರ್‌ಗಳನ್ನು ಒಳ ಗೊಂಡು 80 ಅಡಿ ಮುಖ್ಯರಸ್ತೆಯ ಈದ್ಗಾ ಮೈದಾನದ ಹತ್ತಿರ ತಲುಪುತ್ತದೆ.

**32ನೇ ವಾರ್ಡ್**

ಗೊರೂರು ಮುಖ್ಯ ರಸ್ತೆಯಿಂದ ತಟ್ಟೆಕೆರೆ ಗ್ರಾಮ (ಎಸ್.ಎಂ.ಕೃಷ್ಣನಗರ, ಹೆಚ್.ಡಿ.ದೇವೇಗೌಡ ನಗರ ಒಳಗೊಂಡು ಸರ್ವೆ ನಂ.95ರ ಮೂಲಕ ಹಾಸನ ಗೊರೂರು ರಸ್ತೆಯ ತಟ್ಟೆಕೆರೆ ಗ್ರಾಮದ ಸರ್ವೆ ನಂ.1ರ ಬಿಂದು ತಲುಪುತ್ತದೆ.

**33ನೇ ವಾರ್ಡ್**

ಹಾಸನ-ಬೇಲೂರು ಮುಖ್ಯ ರಸ್ತೆಯ ವಿಜಯನಗರ ಉದ್ಯಾನವನದ ಸರ್ಕಲ್‌ನಿಂದ ಪ್ರಾರಂಭಗೊಂಡು ತಣ್ಣೀರು ಹಳ್ಳ ಸರ್ಕಲ್, ಹಾಲುವಾಗಿಲು ಮುಖ್ಯ ರಸ್ತೆ, (ಚಿಕ್ಕಮಂಡಿ ಗನಹಳ್ಳಿ ಗ್ರಾಮದ ಬಲಭಾಗದ ಎಲ್ಲಾ ಸರ್ವೆ ನಂಬರ್‌ಗಳನ್ನೊಳಗೊಂಡು) ದೇವರಾಯಪಟ್ಟಣ, ಹಾಸನ ಬೇಲೂರು ಮುಖ್ಯ ರಸ್ತೆ ಬಲಭಾಗ ವಿಜಯನಗರ ಉದ್ಯಾನ ವನದ ಸರ್ಕಲ್‌ಗೆ ತಲುಪುತ್ತದೆ.

**34ನೇ ವಾರ್ಡ್**

ಹಾಸನ-ಬೇಲೂರು ಮುಖ್ಯ ರಸ್ತೆ ಉದ್ದೂರು ಗ್ರಾಮದ ಸರ್ವೆ ನಂ.24ರಿಂದ ಪ್ರಾರಂಭಗೊಂಡು ಪೂರ್ವಾಭಿಮುಖವಾಗಿ ಚಿಕ್ಕಕೊಂಡಗುಳ ಸರ್ವೆ ನಂ.69ಕ್ಕೆ ತಲುಪುತ್ತದೆ. ಗುಡ್ಡೇನಹಳ್ಳಿ, ಹಾಸನ-ಬೇಲೂರು ಮುಖ್ಯ ರಸ್ತೆ ಉದ್ದೂರು ಗ್ರಾಮದ ಸರ್ವೆ ನಂ.24ಕ್ಕೆ ತಲುಪುತ್ತದೆ.

**35ನೇ ವಾರ್ಡ್**

ಬೇಲೂರು-ಹಾಸನ ರಸ್ತೆಯ ಹೊಯ್ಸಳ ರೆಸಾರ್ಟ್ ಒಳಗೊಂಡಂತೆ ವಿಜಯನಗರ ಬಡಾವಣೆಯ ಉದ್ಯಾನವನ ಸರ್ಕಲ್‌ಗೆ ತಲುಪುತ್ತದೆ. ಅಲ್ಲಿಂದ ಪುನಃ ಬಲಕ್ಕೆ ನೈರುತ್ಯಕ್ಕೆ ತಿರುಗಿ ಹಿರೋಹೊಂಡ ಶೋರಂ ಮುಂಭಾಗದ ಬಿ.ಎಂ. ರಸ್ತೆಗೆ ತಲುಪುತ್ತದೆ. ಅಲ್ಲಿಂದ ದೇವರಾಯಪಟ್ಟಣ ಸರ್ಕಲ್, ಅಣಚಿ ಹಳ್ಳಿ, ಹಂದಿನಕೆರೆ ಗ್ರಾಮಗಳ ಗಡಿಗಳನ್ನು ಕೂಡುವ ಉದ್ದೂರು, ಹೂವಿನಹಳ್ಳಿ ಕಾವಲು, ಕೋರಹಳ್ಳಿ ಗ್ರಾಮದ ಗಡಿಗಳು ಕೂಡುವ ಹಾಸನ ಬೇಲೂರು ರಸ್ತೆಗೆ ತಲುಪುತ್ತದೆ.

# ವಿಪಕ್ಷ ನಾಯಕರ ಧ್ವನಿ ಅಡಗಿಸುವುದು ಪ್ರಜಾಪ್ರಭುತ್ವಕ್ಕೆ ಅಪಾಯ

## ಕೇಂದ್ರದ ವಿರುದ್ಧ ಸಿಎಂ ವಾಗ್ದಾಳಿ | ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಪುಸ್ತಕ ಕುರಿತು ಚರ್ಚೆಗೆ ಆಗ್ರಹ

• ಪ್ರಜೋದಯ ವರದಿ

**ಬೆಂಗಳೂರು:** ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕರ ಧ್ವನಿ ಅಡಗಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ. ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾಗಿರುವ ಆಡಳಿತ ಪಕ್ಷದ ಈ ನಡೆಯನ್ನು ತೀವ್ರವಾಗಿ ಖಂಡಿಸುತ್ತೇನೆಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಅವಕಾಶ ನೀಡದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಿಡಿಕಾರಿದ್ದಾರೆ.

ರಾಹುಲ್ ಗಾಂಧಿಯವರು ಮಾಜಿ ಸೇನಾ ಮುಖ್ಯಸ್ಥ ಎಂ.ಎಂ.ನರವಣೆಯವರ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಎಂಬ ಪುಸ್ತಕದಲ್ಲಿನ ವಿಷಯಗಳನ್ನು ಉಲ್ಲೇಖಿಸಿ ರಾಷ್ಟ್ರೀಯ ಭದ್ರತೆಯ ಕುರಿತು ಕೆಲವು ಪ್ರಮುಖ ಪ್ರಶ್ನೆಗಳನ್ನು ಎತ್ತಿದ್ದರು. ಈ ಪುಸ್ತಕವು 2024ರಲ್ಲೇ ಬಿಡುಗಡೆಯಾ ಗಬೇಕಿತ್ತು. ಆದರೆ, ಕೇಂದ್ರ ಸರ್ಕಾರ ಅದರ ಬಿಡುಗಡೆಗೆ ತಡೆಯೊಡ್ಡಿರುವ ಕಾರಣಕ್ಕೆ ಇನ್ನೂ ಪ್ರಕಟವಾಗಿಲ್ಲ. ಇತ್ತೀಚಿನ ಕಾರವಾನ್ ಮ್ಯಾಗಜೀನ್‌ನ ಲೇಖನದಲ್ಲಿ ಈ ಪುಸ್ತಕದ ಕೆಲವು ಬರಹಗಳನ್ನು ಉಲ್ಲೇಖಿಸಲಾಗಿದೆ. ಜನರಲ್ ನರವಣೆಯವರು ಕಾರವಾನ್‌ನ ಲೇಖನದಲ್ಲಿ ಪ್ರಕಟಗೊಂಡಿರುವ ವಿಚಾರಗಳು ತಮ್ಮದಲ್ಲವೆಂದು ಅಲ್ಲಗಳೆದಿಲ್ಲ. ಬದಲಿಗೆ, ತಮ್ಮ ಪುಸ್ತಕ ಬಿಡುಗೆಯಾಗಲು ಸರ್ಕಾರದ ಅನುಮತಿಗಾಗಿ ಕಾಯುತ್ತಿದ್ದೇನೆಂದು ಸಾರ್ವಜನಿಕವಾಗಿ ಹೇಳಿದ್ದಾರೆಂದು ಸಿದ್ದರಾಮಯ್ಯ ತಿಳಿಸಿದ್ದಾರೆ.



ನರವಣೆಯವರ ಬರಹಗಳಲ್ಲಿ ತಪ್ಪುಗಳಿದ್ದರೆ ಅಥವಾ ಅಸತ್ಯದಿಂದ ಕೂಡಿದ್ದರೆ ಕೇಂದ್ರ ಸರ್ಕಾರವು ಪುಸ್ತಕದ ಪ್ರಕಟಣೆಗೆ ಅನುಮತಿ ನೀಡಬಾರದಿತ್ತು. ಆದರೆ, ಕೇಂದ್ರ ಸರ್ಕಾರದ ಮೌನವು ನರವಣೆ ಅವರು ಹೇಳಲು ಹೊರಟಿರುವ ಸತ್ಯವನ್ನು ಅಡಗಿಸುವ ದುಷ್ಟ ಆಲೋಚನೆ ಯಿಂದ ಕೂಡಿದೆ ಎಂಬುದನ್ನು ತೋರುತ್ತದೆ. 2020ರಲ್ಲಿ ಚೀನಾ ಗಡಿಯಲ್ಲಿ ನಡೆದ ಘರ್ಷಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರವು ದಿಟ್ಟ ಹಾಗು ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳಲು ವಿಫಲವಾಯಿತು ಎನ್ನುವ ಮಾಹಿತಿ ಈ ಪುಸ್ತಕದಲ್ಲಿದೆ. ಸರ್ಕಾರದ ಈ ದ್ವಂದ್ವ ನಿಲುವಿನಿಂದ ಸೇನಾಪಡೆಗಳು ಎರಡು ರಾಷ್ಟ್ರಗಳ ನಡುವಿನ ರಾಜಕೀಯ ಸಂದಿಗ್ಧತೆಯನ್ನು ಕೂಡ ನಿಭಾಯಿಸಬೇಕಾಯಿತು. ಇದು ಪ್ರಧಾನಿ ನರೇಂದ್ರ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಲ್ಲಿನ ರಾಜಕೀಯ ನಾಯಕತ್ವದ ವೈಫಲ್ಯ ಮತ್ತು ರಾಷ್ಟ್ರೀಯ ಭದ್ರತೆಯಂತಹ ಗಂಭೀರ ವಿಚಾರಗಳಲ್ಲಿ ಸ್ಪಷ್ಟ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಇರುವ ಅಸಾಮರ್ಥ್ಯವನ್ನು ತೋರಿಸುತ್ತದೆಂದು ಹೇಳಿದ್ದಾರೆ.

ಇಂತಹ ವಿಷಯಗಳು ಸಂಸತ್ತಿನಲ್ಲಿ ಚರ್ಚೆಗೆ ಒಳಪಡಬೇಕು ಎಂಬುದರಲ್ಲಿ ಅನುಮಾನವೇ ಇಲ್ಲ. ಜನರ ಪರವಾಗಿ ಪ್ರಶ್ನೆಗಳನ್ನು ಕೇಳುವುದು ಜವಾಬ್ದಾರಿಯುತ ವಿರೋಧ ಪಕ್ಷದ ನಾಯಕ ನಾಗಿ ರಾಹುಲ್ ಗಾಂಧಿಯವರ ಕರ್ತವ್ಯವಾಗಿದೆ. ಅದನ್ನು ಅವರು ಮಾಡಿದ್ದಾರೆ. ರಾಹುಲ್ ಗಾಂಧಿ ಅವರು ಭಾರತದ ಅಥವಾ ನಮ್ಮ ಸೇನಾಪಡೆಗಳ ವಿರುದ್ಧ ಮಾತನಾಡಿಲ್ಲ. ಹೀಗಿದ್ದರೂ ಅವರ ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು, ಸತತ ಎರಡು ದಿನಗಳ ಕಾಲ ಸಂಸತ್ತನ್ನು ಸ್ಥಗಿತ ಗೊಳಿಸಿ, ಎಂಟು ವಿರೋಧ ಪಕ್ಷದ ಸದಸ್ಯರನ್ನು ಅಮಾನತುಗೊಳಿಸಿ, ರಾಷ್ಟ್ರಪತಿಯ ಭಾಷಣದ ಮೇಲೆ ವಿರೋಧ ಪಕ್ಷದ ನಾಯಕನಿಗೆ ಮಾತನಾಡಲು ಅವಕಾಶವನ್ನೇ ನಿರಾಕರಿಸಿರುವುದು ಪ್ರಜಾಪ್ರಭುತ್ವದ ಕತ್ತು ಹಿಸುಕಿದ ಕ್ರಮವಾಗಿದೆ ಎಂದು ಕಿಡಿಕಾರಿದ್ದಾರೆ.

ರಾಷ್ಟ್ರೀಯ ಭದ್ರತೆಯಂತಹ ಗಂಭೀರ ವಿಚಾರಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಣೆಗಾರಿಕೆ ಮತ್ತು ರಾಜಕೀಯ ಪರಿಣಾಮಗಳನ್ನು ಎದುರಿಸುವ ಬದ್ಧತೆಯನ್ನು ತೋರ್ಪ ಡಿಸುವಂತಿರಬೇಕು. ಆದರೆ, ಮೋದಿ ಸರ್ಕಾರವು ಒತ್ತಡ ತಂತ್ರದ ಮೂಲಕ ಎದುರಾಳಿಗಳ ಧ್ವನಿಯನ್ನೇ ಹತ್ತಿಕ್ಕಲು ಹೊರಟಿದೆ. ಇಲ್ಲಿ ಜನರಿಂದ ಮುಚ್ಚಿಡುವಂತಹ ವಿಷಯಗಳು ಇಲ್ಲದಿ ದ್ದರೆ ಚರ್ಚೆಯನ್ನು ನಿರಾಕರಿಸುತ್ತಿರುವುದು ಏಕೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಸಂಪೂರ್ಣವಾಗಿ ರಕ್ಷಿಸಲಾಗಿದ್ದರೆ, ಸಂಸತ್ತಿನ ಪರಾಮರ್ಶೆಗೆ ಒಳಪಡಲು ಏಕೆ ಭಯ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿಯ ದೇಶ ಮೊದಲು, ಧರ್ಮ ಮೊದಲು ಇವೆಲ್ಲ ಬೊಗಳೆ ಭಾಷಣದ ಸರಕುಗಳಷ್ಟೆ. ಮೌನ, ಪಲಾಯನ ಮತ್ತು ಶರಣಾಗತಿಗಳನ್ನು ಸಂಘಪರಿವಾರ ಬಿಜೆಪಿನಾಯಕರಿಗೆ ಧಾರೆಯೆರೆದು ಕಳಿಸಿದೆ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆಯೆಂದು ಸಿದ್ದರಾಮಯ್ಯ ಅವರು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

### ಭೂ ಮಂಜೂರಾತಿಗೆ ಆಗ್ರಹಿಸಿ ಫಲಾನುಭವಿಗಳ ಪ್ರತಿಭಟನೆ

» ಮೊದಲನೇ ಪುಟದಿಂದ

ಭೂಮಿಯಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ ಹಿನ್ನಲೆ ಯಲ್ಲಿ ಬೇರೆ ಯಾವ ಆದಾಯದ ಮೂಲವೂ ಇಲ್ಲದೇ ಇದೇ ಭೂಮಿಯನ್ನು ನಂಬಿ ಕೃಷಿ ಮೂಲಕ ಬದುಕು ಸಾಗಿಸುತ್ತಿರುವ ಕಾರೆಕೆರೆ ಕಾವಲು ಗ್ರಾಮದ 46 ದಲಿತ ಕುಟುಂಬಗಳಿಗೆ ದೀರ್ಘಕಾಲದ ಭೂಸ್ವಾಧೀನಾನುಭವ ಮತ್ತು ಸಾಗುವಳಿಯನ್ನು ಪರಿಗಣಿಸಿ, ಸ್ಥಳ ಪರಿಶೀಲನೆ ನಡೆಸಿ, ಮೂಲ ಮಂಜೂರಾತಿಯನ್ನು ರದ್ದುಗೊಳಿಸಿ ಹಾಲಿ ಸಾಗುವಳಿದಾರರಿಗೆ ಭೂಮಿ ಮಂಜೂರು ಮಾಡಬೇಕೆಂದು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷಹೆಚ್.ಆರ್.ನವೀನ್ ಕುಮಾರ್, ಎಂ.ಜಿ. ಪೃಥ್ವಿ, ಹೆಚ್.ಸ್ವಾಮಿ, ಪಾಂಡುರಂಗ ಇತರರಿದ್ದರು.

### ಜಮೀನಿನಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮರಾ ಕಳವು

**ಹಾಸನ:** ರಾತ್ರೋ ರಾತ್ರಿ ಜಮೀನಿಗೆ ನುಗ್ಗಿರುವ ದುಷ್ಕ ರ್ಮಿಗಳು ಕಂಟೇನರ್ ಬಾಗಿಲು ಮುರಿದು ಅದರಲ್ಲಿದ್ದ ವಸ್ತು ಹಾಗು ಶುಂಠಿಯನ್ನು ಸುಟ್ಟು ಹಾಕಿದ್ದಲ್ಲದೆ ಸಾಕ್ಷ್ಯ ನಾಶಕ್ಕಾಗಿ ಸಿಸಿಟಿವಿ ಕ್ಯಾಮರಾ ಕಳವು ಮಾಡಿರುವ ಘಟನೆ ಉದ್ದೂರು ಗ್ರಾಮದಲ್ಲಿ ನಡೆದಿದೆ. ಮಧುರ ಎಂಬುವವರ ಜಮೀನಿಗೆ ಫೆ.2ರ ರಾತ್ರಿ ಬೈಕ್ ಮತ್ತು ಕಾರಿನಲ್ಲಿ ಬಂದಿರುವ ಕಿಡಿಗೇಡಿಗಳು ಕಂಟೇನರ್ ಬಾಗಿಲು ಮುರಿದು ಒಳನುಗ್ಗಿದ್ದಾರೆ. ಅಲ್ಲಿಟ್ಟಿದ್ದ ಹಾಸಿಗೆ, ದಿಂಬು, ಚಾಪೆ ಟಾರ್ಪಲ್ ಮತ್ತು ಎಂಟು ಸಾವಿರ ರೂ. ಬೆಲೆಯ ಶುಂಠಿಯನ್ನು ಸುಟ್ಟು ಹಾಕಿದ್ದಾರೆ. ಅಲ್ಲಿಯೇ ಇದ್ದ ಸಿಸಿಟಿವಿ ಕ್ಯಾಮರಾ ಸಹ ಕಳವು ಮಾಡಿ ಪರಾರಿಯಾಗಿದ್ದಾರೆ.

# ಕೇಂದ್ರ ಹಣಕಾಸು, ರೈಲ್ವೆ ಸಚಿವರೊಂದಿಗೆ ಹೆಚ್‌ಡಿಕೆ ಮಾತುಕತೆ

• ಪ್ರಜೋದಯ ವರದಿ

**ನವದೆಹಲಿ:** ಬಜೆಟ್ ನಂತರ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗು ರೈಲ್ವೆ ಸಚಿವ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಉಕ್ಕು ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ ಸಂಸತ್ತಿನಲ್ಲಿ ಕೇಂದ್ರದ ಹಣಕಾಸು ಸಚಿವರ ಕಚೇರಿಯಲ್ಲಿ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದ ಕುಮಾರಸ್ವಾಮಿ ಅವರು, ಪ್ರಮುಖ ಅಭಿವೃದ್ಧಿ ಆದ್ಯತೆಗಳ ಕುರಿತು ಚರ್ಚೆ ನಡೆಸಿದರು. ಉಕ್ಕು ಸಚಿವಾಲಯದ ಹೊಸ ಹೂಡಿಕೆಗಳು ಮತ್ತು ಈಗಾಗಲೇ ನಡೆಯುತ್ತಿರುವ ಯೋಜನೆಗಳ ಬಗ್ಗೆ ಹಾಗೂ ಉಕ್ಕು ವಲಯವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಾನ್ಯ ಸಚಿವರ ಜೊತೆ ಸಮಾಲೋಚನೆ ನಡೆಸಲಾಯಿತು ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.



ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವ ಮತ್ತು ವಿಕಸಿತ ಭಾರತ-2047 ದೃಷ್ಟಿಕೋನವನ್ನು ಮುನ್ನಡೆಸುವ ಭವಿಷ್ಯತ್ತಿನ ಕೇಂದ್ರದ ಆಯವ್ಯಯವನ್ನು ಮಂಡಿಸಿದ್ದಕ್ಕಾಗಿ ಹಣಕಾಸು ಸಚಿವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದೆಂದು ಹೇಳಿದ್ದಾರೆ.

ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಯಾಗಿ, ಮಂಡ್ಯ ಲೋಕಸಭೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೈಲ್ವೆ ಮೂಲಸೌಕರ್ಯ ವೃದ್ಧಿಸುವ ಹಾಗು ರಾಜ್ಯದಲ್ಲಿ ಇನ್ನೂ ಬಾಕಿ ಉಳಿದಿರುವ ರೈಲ್ವೆ ಯೋಜನೆಗಳ ಬಗ್ಗೆ ಮಾತುಕತೆ ನಡೆಸಿದರು. ಈಗಾಗಲೇ ರಾಜ್ಯಕ್ಕೆ ಹೈ ಸ್ಪೀಡ್ ರೈಲು ಕಾರಿಡಾರ್‌ಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಅದಕ್ಕೆ ಹೆಚ್ಚುವರಿಯಾಗಿ ಬೆಂಗಳೂರು-ಪುಣೆ ಹೈ-ಸ್ಪೀಡ್ ರೈಲು ಕಾರಿಡಾರ್ ನೀಡಲಾಗಿದೆ. ಈ ಮಾರ್ಗವು ಹುಬ್ಬಳ್ಳಿ, ಬೆಳಗಾವಿ ಮೂಲಕ ಹಾದು ಹೋಗಲಿದೆ ಎಂಬುದಾಗಿ ರೈಲ್ವೆ ಸಚಿವರು ತಿಳಿಸಿದರೆಂದು ಅವರು ಹೇಳಿದರು.

ಬೆಂಗಳೂರು-ಮುಂಬೈಗೆ ಹೊಸ ರೈಲು ಆರಂಭಿಸಲಾಗುವುದು ಎನ್ನುವ ಮಾಹಿತಿಯನ್ನು ರೈಲ್ವೆ ಸಚಿವರು ತಮಗೆ ನೀಡಿದರು. ಬೆಂಗಳೂರು-ಪುಣೆ ಹೈ ಸ್ಪೀಡ್ ರೈಲು ಕಾರಿಡಾರ್ ಹಾಗೂ ಬೆಂಗಳೂರು-ಮುಂಬೈ ನಡುವಿನ ಹೊಸ ರೈಲಿನಿಂದ ಕರ್ನಾಟಕಕ್ಕೆ ಮತ್ತಷ್ಟು ಅನುಕೂಲ ಆಗಲಿದೆ. ಹೊಸ ರೈಲು ಸಂಪರ್ಕ ಮತ್ತು ಹಾಲಿ ರೈಲು ಮಾರ್ಗಗಳಲ್ಲಿ ವನ್ಯಜೀವಿಗಳ ಅಪಘಾತ ಗಳನ್ನು ತಡೆಗಟ್ಟಲು ರೈಲ್ವೆ ಬೇಲಿ ಮತ್ತು ಬ್ಲಾಕ್ ಕಾರಿಡಾರ್‌ಗಳ ಅನುಷ್ಠಾನದ ಕುರಿತು ವಿವರ ವಾದ ಮಾತುಕತೆ ನಡೆಸಲಾಯಿತು ಎಂದು ಹೇಳಿದರು.

ಕರ್ನಾಟಕದ ಎಲ್ಲಾ ಬಾಕಿ ಇರುವ ರೈಲ್ವೆ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು ಮತ್ತು ಮೈಸೂರು-ಬೆಂಗಳೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರಾಮನಗರದಲ್ಲಿ ನಿಲುಗಡೆಯನ್ನು ಕೋರಿ ಮನವಿ ಮಾಡಲಾಯಿತು. ರಾಜ್ಯದಲ್ಲಿ ರೈಲ್ವೆ ಮೂಲಸೌಕರ್ಯ, ಸಂಪರ್ಕ ಮತ್ತು ಸಾರ್ವಜನಿಕ ಸೇವಾ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ರೈಲ್ವೆ ಸಚಿವರ ಜೊತೆ ನಡೆಸಿದ ಮಾತುಕತೆ ಫಲಪ್ರದವಾಗಿತ್ತು. ತಮ್ಮ ಮನವಿಗಳ ಬಗ್ಗೆ ಕೇಂದ್ರ ರೈಲ್ವೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರೆಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಸಾ.ರಾ.ಮಹೇಶ್, ಸಂಸದ ಮಲ್ಲೇಶ್ ಬಾಬು, ವಿಧಾನ ಪರಿಷತ್ ಸದಸ್ಯ ಮಂಜೇಗೌಡ ಅವರು ಉಪಸ್ಥಿತರಿದರು.



### ಭಾಗ್ಯಲಕ್ಷ್ಮಿ ಯೋಜನೆ : ನೋಂದಣಿ ಪ್ರಮಾಣ ಹೆಚ್ಚಳ

» ಮೊದಲನೇ ಪುಟದಿಂದ

ಅದರಡಿ ಕುಟುಂಬದ ಇಬ್ಬರು ಹೆಣ್ಣು ಮಕ್ಕಳ ಹೆಸರಿನಲ್ಲಿ ಪ್ರತಿ ತಿಂಗಳು 3,000 ರೂ.ನಂತೆ 15 ವರ್ಷಗಳವರೆಗೆ ಠೇವಣಿ ಹೂಡಲಾಗುತ್ತದೆ. 21 ವರ್ಷ ಪೂರ್ಣಗೊಂಡ ಬಳಿಕ ಅಂದಾಜು ಪರಿಪಕ್ವ ಮೊತ್ತ 1,27,000 ರೂ. ಫಲಾನುಭವಿಯ ಖಾತೆಗೆ ಜಮಾವಣೆಯಾಗುತ್ತದೆ.

**ಮೆಚ್ಯುರಿಟಿ ಪಡೆದವರ ವಿವರ**

2006-07ರಲ್ಲಿ ಅರ್ಜಿ ಸಲ್ಲಿಸಿದ್ದ ಹಾಸನ ತಾಲ್ಲೂಕಿನ 1030, ಚನ್ನರಾಯಪಟ್ಟಣ 999, ಹೊಳೆನರಸೀಪುರ 733, ಬೇಲೂರು 738, ಸಕಲೇಶಪುರ 415, ಆಲೂರು 321, ಅರಸೀಕೆರೆ 1494, ಅರಕಲ ಗೂಡು 817 ಹೆಣ್ಣು ಮಕ್ಕಳಿಗೆ ಮೆಚ್ಯುರಿಟಿ ಹಣ ಪಾವತಿಯಾಗಿದೆ.

2007-08ರಲ್ಲಿ ಹಾಸನ ತಾಲ್ಲೂಕಿನ 510, ಚನ್ನರಾಯಪಟ್ಟಣ 381, ಹೊಳೆನರಸೀಪುರ 188, ಬೇಲೂರು 391, ಸಕಲೇಶಪುರ 238, ಆಲೂರು 151, ಅರಸೀಕೆರೆ 655 ಹಾಗು ಅರಕಲಗೂಡು ತಾಲ್ಲೂಕಿನ 404 ಮಕ್ಕಳು ಯೋಜನೆಯ ಪ್ರಯೋಜನ ಪಡೆದಿದ್ದಾರೆ.

### ಗರ್ಭಾಶಯ ಕೊರಳ ಕ್ಯಾನ್ಸರ್‌ನಿಂದ ಪಾರಾಗಲು ಲಸಿಕೆ ಪಡೆಯಿರಿ

» ಮೊದಲನೇ ಪುಟದಿಂದ

ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞೆ ಡಾ||ಎ. ಸಾವಿತ್ರಿ ಅವರು ಮಾತನಾಡಿ, ಈ ಗಂಭೀರ ಕಾಯಿಲೆ ಕೇವಲ ಮಹಿಳೆಯರು ಮಾತ್ರವಲ್ಲದೆ ಪುರುಷರಲ್ಲೂ ಕಾಣಿಸಿಕೊಳ್ಳುತ್ತದೆಯಾದರೂ ಹರಡುವಿಕೆ ಪ್ರಮಾಣ ಹೆಚ್ಚಿರುತ್ತದೆ. ಅಸುರಕ್ಷಿತ ಲೈಂಗಿಕ ಕ್ರಿಯೆಯೇ ಗರ್ಭಾಶಯ ಕೊರಳ ಕ್ಯಾನ್ಸರ್‌ಗೆ ಮೂಲ ಕಾರಣ. ಆದ್ದರಿಂದ ಸಾಕಷ್ಟು ಜಾಗೃತಿ ವಹಿಸಬೇಕು. ದೇಶದಲ್ಲಿ ಒಂದು ವರ್ಷಕ್ಕೆ 1.27 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿವೆ. ಅದರಲ್ಲಿ 79 ಸಾವಿರ ಮಹಿಳೆಯರು ಮೃತಪಟ್ಟಿದ್ದಾ ರೆಂದು ಮಾಹಿತಿ ನೀಡಿದರು.

ನಮ್ಮ ದೇಶದಲ್ಲಿ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಹೆಚ್ಚಿದೆ. ಏನಾದರೂ ನೋವು ಕಾಣಿಸಿಕೊಂಡಾಗ ಮಾತ್ರ ಆಸ್ಪತ್ರೆಗೆ ಭೇಟಿ ನೀಡುತ್ತಾರೆ. ಹೊರ ದೇಶಗಳಲ್ಲಿ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಕಡ್ಡಾಯವಾಗಿರುವುದರಿಂದ ಹೆಚ್.ಪಿ.ವಿ. ಲಸಿಕೆಯನ್ನು ಎಲ್ಲರೂ ಕಡ್ಡಾಯವಾಗಿ ಹಾಕಿಸಿಕೊಳ್ಳುತ್ತಾರೆ. ಹೀಗಾಗಿ ಅಲ್ಲಿ ಮರಣ ಪ್ರಮಾಣ ಕಡಿಮೆ ಎಂದರು.

**ಪ್ರಕರಣ ಹೆಚ್ಚುವ ಸಾಧ್ಯತೆ**

ಜಿಲ್ಲೆಯಲ್ಲಿ ವಿವಾಹ ಪೂರ್ವ ಗರ್ಭಿಣಿ ಪ್ರಕರಣಗಳು ಹೆಚ್ಚುತ್ತಿದ್ದು, ಗರ್ಭಾಶಯ ಕೊರಳ ಕ್ಯಾನ್ಸರ್ ಪ್ರಮಾಣ ಮುಂದಿನ ದಿನಗಳಲ್ಲಿ ಹೆಚ್ಚಾಗುತ್ತದೆ. ಪೋಷಕರು ತಮ್ಮ ಮಕ್ಕಳ ಮೇಲೆ ಗಮನ ಹರಿಸಬೇಕು. ವಿದ್ಯಾಭ್ಯಾಸದ ಹೊರತಾಗಿ ಮಕ್ಕಳು ಅನ್ಯ ಚಟುವಟಿಕೆಗಳಲ್ಲಿ ತೊಡಗದಂತೆ ನಿಗಾ ವಹಿಸಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಹೆಚ್.ಪಿ.ವಿ. ಲಸಿಕೆಗೆ ಹೆಚ್ಚು ಹಣ ಖರ್ಚಾಗುತ್ತದೆಂದು ಪೋಷಕರು ಮಕ್ಕಳಿಗೆ ಲಸಿಕೆ ನೀಡಲು ಹಿಂದೇಟು ಹಾಕುತ್ತಾರೆ. ಆರೋಗ್ಯಕ್ಕಿಂತ ಹಣ ಮುಖ್ಯವಲ್ಲವೆಂಬ ಅರಿವು ಮೂಡಬೇಕು. ರಾಧಮ್ಮ ಜನ ಸ್ಪಂದನ ಸಂಸ್ಥೆಯು ಪತ್ರಕರ್ತರ ಮಕ್ಕಳಿಗೆ ಉಚಿತವಾಗಿ ಲಸಿಕೆ ವ್ಯವಸ್ಥೆ ಮಾಡಿರು ವುದು ಶ್ಲಾಘನೀಯ. ಸಂಸ್ಥೆಯ ಹೇಮಂತ್ ಅವರ ತಾಯಿಯ ಹೆಸರಿನಲ್ಲಿ ಬಡಮಕ್ಕಳಿಗೆ ಪುರಸ್ಕಾರ ಸೇರಿ ಅನೇಕ ಸಮಾಜ ಪರ ಕೆಲಸಗಳ ಮೂಲಕ ಎಲ್ಲರಿಗೂ ಚಿರಪರಿಚಿತರಾಗಿದ್ದಾರೆಂದರು.

ರಾಧಮ್ಮ ಜನ ಸ್ಪಂದನ ಸಂಸ್ಥೆ ಮುಖ್ಯಸ್ಥ ಹೇಮಂತ್ ಅವರು ಮಾತನಾಡಿ, ಗ್ರಾಮೀಣ ಪ್ರದೇಶದ ಅನೇಕರಿಗೆ ಕ್ಯಾನ್ಸರ್ ಬಗ್ಗೆ ಮಾಹಿತಿಯೇ ಇಲ್ಲ. 30 ರಿಂದ 35 ವಯಸ್ಸಿಗೆ ಮಹಿಳೆಯರು ಖಾಯಿಲೆಯಿಂದ ಸಾವನ್ನಪ್ಪುತ್ತಿರುವುದು ವಿಷಾದದ ಸಂಗತಿ. ಸರ್ಕಾರವೇ ಮುತುವರ್ಜಿ ವಹಿಸಿ ರಾಜ್ಯಾದ್ಯಂತ ಲಸಿಕೆ ನೀಡುವ ಯೋಜನೆ ಘೋಷಿಸಬೇಕೆಂದು ಆಗ್ರಹಿಸಿದರು.

ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಚೈತ್ರಾ ನಾಯಕರಹಳ್ಳಿ, ಪತ್ರಕರ್ತರ ಸಂಘದ ಪದಾಧಿಕಾರಿಗಳು ಹಾಜರಿ ದ್ದರು. ಸಂಘದ ಕಾರ್ಯದರ್ಶಿ ಹರೀಶ್ ಕಾರ್ಯಕ್ರಮ ನಿರೂಪಿಸಿದರು. ನಗರದ ಪತ್ರಕರ್ತರ ಹೆಣ್ಣು ಮಕ್ಕಳಿಗೆ ಹೆಚ್.ಪಿ.ವಿ. ಲಸಿಕೆ ನೀಡಲಾಯಿತು.

### ರಾಜ್ಯದ ನೀರಾವರಿ ಬಿಕ್ಕಟ್ಟು ಪರಿಹರಿಸಿ

» ಮೊದಲನೇ ಪುಟದಿಂದ

ಕಡೆಯಲ್ಲಿ ಗೋವಾದಿಂದ ತೊಂದರೆ ಎದುರಿಸುತ್ತಿದೆ. ನಾನು ಜೀವನದ ಕೊನೆಕಾಲದಲ್ಲಿ ಇದ್ದೇನೆ. ಈ ವೃದ್ಧನ ಮನವಿಗೆ ಮಾನವೀಯತೆಯಿಂದ ಸ್ಪಂದಿಸಿ ಎಂದು ಮನವಿ ಮಾಡಿಕೊಂಡರು.

ನರೇಂದ್ರ ಮೋದಿ ಅವರ ಸರ್ಕಾರ ಈ ಬಿಕ್ಕಟ್ಟಿಗೆ ಪರಿಹಾರ ನೀಡಬೇಕು. ನಾನು ನಿಮ್ಮ (ಎನ್‌ಡಿಎ) ಜೊತೆಯಲ್ಲಿಯೇ ಇರುತ್ತೇನೆ. ನನ್ನ ಮಗ ನಿಮ್ಮ ಸಂಪುಟದಲ್ಲಿ ಇದ್ದಾನೆ. ನಾವು ಮುಂದೆಯೂ ನಿಮ್ಮ ಜೊತೆಗೇ ಇರುತ್ತೇವೆ ಹಾಗು ಮೈತ್ರಿಕೂಟ ಬದಲಾವಣೆ ಮಾಡುವ ಯಾವ ಪ್ರಶ್ನೆಯೇ ಇಲ್ಲ. ರಾಜ್ಯದ ಜನರಿಗೆ ನ್ಯಾಯ ಒದಗಿಸಿ ಎಂಬುದಷ್ಟೇ ನನ್ನ ಏಕೈಕ ಮನವಿ ಎಂದು ದೇವೇಗೌಡರು ಕೋರಿ ಕೊಂಡರು.

ಇದೇ ವೇಳೆ ಯುರೋಪಿಯನ್ ಒಕ್ಕೂಟ ಹಾಗು ಅಮೇರಿಕಾ ಜೊತೆ ಯಶಸ್ವಿಯಾಗಿ ವ್ಯಾಪಾರ ಒಪ್ಪಂದ ಮಾಡಿಕೊಂಡ ಭಾರತದ ರಾಜತಾಂತ್ರಿಕ ಜಾಣ್ಮೆಯನ್ನು ಕೊಂಡಾಡಿದ ಮಾಜಿ ಪ್ರಧಾನಿ, ಇದಕ್ಕೆ ಕಾರಣೀಭೂತರಾದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಈ ಬಗ್ಗೆ ನಾನು ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆಂಬ ಅಂಶವನ್ನು ಅವರು ಉಲ್ಲೇಖಿಸಿದರು.

ಮೋದಿ ಅವರನ್ನು ವಿನಾಕಾರಣ ಟೀಕೆ ಮಾಡುತ್ತಿರುವ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡ ಅವರು, ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಆಗಿದ್ದು, ಜನರ ಆದಾಯ ಹೆಚ್ಚಳ ಆಗುತ್ತಿದೆ ಹಾಗೂ ರೈತ ಪರವಾಗಿ ಈ ಸರ್ಕಾರ ಕೆಲಸ ಮಾಡುತ್ತಿದೆ. 2047ಕ್ಕೆ ಭಾರತವು ಮೋದಿ ಅವರ ನೇತೃತ್ವದಲ್ಲಿ ವಿಕಸಿತ ಭಾರತ ಆಗುವುದರಲ್ಲಿ ಯಾವುದೇ ಸಂಶಯ ಇಲ್ಲವೆಂದು ಹೇಳಿದರು.

# ಕೇಂದ್ರ ಸರ್ಕಾರದ ಯೋಜನೆಯಲ್ಲಿ ಶಾಸಕರ ಹಸ್ತಕ್ಷೇಪ ಆರೋಪ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬೆಳಗೋಡು ಹೋಬಳಿಯ ಬಾಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದ ಸಂಜೀವಿನಿ ಶೆಡ್ ಹಾಗು ಅತ್ಯಾಧುನಿಕ ಶೌಚಾಲಯಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿದೆ ಎಂಬ ಆರೋಪ ಕೇಳಿಬಂದಿದೆ.

ಕೇಂದ್ರ ಸರ್ಕಾರದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿಯಲ್ಲಿ ನಿರ್ಮಾಣಗೊಂಡ ಸಂಜೀವಿನಿ ಶೆಡ್ ಹಾಗೂ ಶೌಚಾಲಯಗಳ ಉದ್ಘಾಟನೆಗೆ ಸಂಬಂಧಿಸಿದಂತೆ ಕಾನೂನು ಉಲ್ಲಂಘನೆಯಾಗಿದೆ ಎನ್ನಲಾಗಿದೆ. ಈ ಕಾರಣದಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹ ಣಾಧಿಕಾರಿ ಸೇರಿ ಅಧಿಕಾರಿಗಳು ಕಾರ್ಯಕ್ರಮದಿಂದ ದೂರ ಉಳಿದಿದ್ದರು.

ಸಂಜೀವಿನಿ ಶೆಡ್ ಹಾಗು ಶೌಚಾಲಯಗಳು ಕೇಂದ್ರ ಸರ್ಕಾರದ ಯೋಜನೆಯಡಿ ನಿರ್ಮಾಣವಾಗಿರುವ ಹಿನ್ನಲೆಯಲ್ಲಿ ಉದ್ಘಾಟನಾ ಕಾರ್ಯಕ್ರಮಕ್ಕೆ ಸಂಸದರನ್ನು ಆಹ್ವಾನಿಸ ಬೇಕಿತ್ತು. ಈ ಶಿಷ್ಟಾಚಾರ ಪಾಲಿಸದೇ ನೇರವಾಗಿ ಶಾಸಕರಿಂದ ಉದ್ಘಾಟನೆ ನಡೆಸಲಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ಇದೇ ಕಾರಣದಿಂದಾಗಿ ಅಧಿಕಾರಿಗಳು ಕಾರ್ಯಕ್ರಮದಿಂದ ದೂರ ಉಳಿದಿದ್ದಾರೆ ಎನ್ನಲಾಗಿದೆ.




ಅಧಿಕೃತ ಮೂಲಗಳ ಪ್ರಕಾರ, ಕೇಂದ್ರ ಸರ್ಕಾರದ ಯೋಜನೆಗಳ ಉದ್ಘಾಟನೆ ಹಾಗು ಕಾರ್ಯಕ್ರಮಗಳಲ್ಲಿ ಪಾಲಿಸಬೇಕಾದ ನಿಯಮಗಳು ಹಾಗೂ ಶಿಷ್ಟಾಚಾರಗಳಿವೆ. ಅವುಗಳನ್ನು ಉಲ್ಲಂಘಿಸಿದಲ್ಲಿ ಅಧಿಕಾರಿಗಳು ಹಾಜರಾಗದೆ ಇರುವುದೂ ಆಡಳಿತಾತ್ಮಕ ಕ್ರಮದ ಭಾಗವಾಗಿದೆ. ಸ್ಥಳೀಯ ಮಟ್ಟದಲ್ಲಿ ಈ ವಿಚಾರ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದು, ಅಭಿವೃದ್ಧಿ ಕಾಮ ಗಾರಿಗಳ ಉದ್ಘಾಟನೆ ರಾಜಕೀಯ ವಿವಾದಗಳಿಗೆ ಕಾರಣವಾಗುತ್ತಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದೆ. ನಿಯಮ ಮತ್ತು ಪ್ರೋಟೋಕಾಲ್ ಪಾಲನೆಯೇ ಆಡಳಿತ ವ್ಯವಸ್ಥೆಯ ಶಿಸ್ತು ಎಂಬ ಮಾತುಗಳು ಕೇಳಿಬರುತ್ತಿವೆ.

ಇದೇ ರೀತಿಯ ವಿವಾದ ಕಳೆದ ಐದು-ಆರು ತಿಂಗಳ ಹಿಂದೆ ಕೂಡ ಎದುರಾಗಿತ್ತು. ಕ್ಷೇತ್ರದ ಮೂಲಕ ಹಾದು ಹೋಗುವ ಹೊಸ ಬೈಪಾಸ್ ನಿಂದ ಬೇರ್ಪಟ್ಟ ಪಾಳ್ಯ, ಬಾಳುಪೇಟೆ ಹಾಗು ಸಕಲೇಶಪುರ ಪಟ್ಟಣದೊಳಗಿನ ಹಳೆಯ ರಾಷ್ಟ್ರೀಯ ಹೆದ್ದಾರಿಯನ್ನು ಒನ್ ಟೈಮ್ ಇಂಪ್ರೂವ್‌ಮೆಂಟ್ ಅನುದಾನದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಮರು ಡಾಂಬರೀಕರಣ ಮಾಡಲಾಗಿತ್ತು. ಈ ಕಾಮಗಾರಿಗೆ ಸಂಸದ ಶ್ರೇಯಸ್ ಪಟೇಲ್ ಅವರು, ಇದು ಕೇಂದ್ರ ಸರ್ಕಾರದ ಅನುದಾನ ಎಂದು ಗುದ್ದಲಿ ಪೂಜೆ ನೆರವೇರಿಸಿದ್ದರು. ಅದೇ ಕಾಮಗಾರಿಗೆ ನಂತರ ಶಾಸಕ ಸಿಮೆಂಟ್ ಮಂಜು ಕೂಡ ಗುದ್ದಲಿ ಪೂಜೆ ನೆರವೇರಿಸಿದ್ದರಿಂದ ಆಗಲೂ ಶಿಷ್ಟಾಚಾರದ ವಿಷಯ ಮುನ್ನೆಲೆಗೆ ಬಂದಿತ್ತು.

> **ಸಂಸತ್ ಹಾಗು ವಿಧಾನಸಭೆ ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲೇ ತುರ್ತಾಗಿ ಕಾಮಗಾರಿ ಉದ್ಘಾಟನೆ ಮಾಡುವ ಅಗತ್ಯ ಏನಿತ್ತು. ಸಂಸದರು ಅಧಿವೇಶನದ ನಂತರ ದಿನ ನಿಗದಿ ಮಾಡಿಕೊಂಡು ಉದ್ಘಾಟನೆ ಮಾಡಬಹುದಿತ್ತು. ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ಶಾಸಕರು ಗಮನಹರಿಸಬೇಕು. ಇಲ್ಲವಾದಲ್ಲಿ ಸಂಸದರೊಂದಿಗೆ ಮಾತನಾಡಿ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ.**
> **-ಸಂದೀಪ್‌ಬೆಳಗೋಡು, ಯುವ ಕಾಂಗ್ರೆಸ್ ಮುಖಂಡ**

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK